International Journal of Kannada Research
www.kannadajournal.com

**ISSN: 2454–5813**
IJKR 2023; 9(1): 270-278
© 2023 IJKR
www.kannadajournal.com
Received: 21-01-2023
Accepted: 26-02-2023

**ಪಿ. ಆರಡಿಮಲ್ಲಯ್ಯ ಕಟ್ಟೇರ**
ಸಹಾಯಕ ಪ್ರಾಧ್ಯಾಪಕರು ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು ಶಿವಮೊಗ್ಗ, ಕರ್ನಾಟಕ, ಭಾರತ

**ಡಾ. ಎಂ. ಮಂಜಣ್ಣ**
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ದಾವಣಗೆರೆ ಜಿ.ಯು.ಆಯುರ್ವೇದಿಕ ಆಸ್ಪತ್ರೆ ಎದುರು ಆಂಜನೇಯ ಬಡಾವಣೆ ಎದುರು ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಪಿ. ಆರಡಿಮಲ್ಲಯ್ಯ ಕಟ್ಟೇರ**
ಸಹಾಯಕ ಪ್ರಾಧ್ಯಾಪಕರು ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು ಶಿವಮೊಗ್ಗ, ಕರ್ನಾಟಕ, ಭಾರತ

# ವಿಭಜಿತ ದ್ವಂದ್ವ ಚಹರೆಗಳ ಅಗತ್ಯದ ಸಾಂಸ್ಕೃತಿಕ ನಿರೂಪಣೆ

**ಪಿ. ಆರಡಿಮಲ್ಲಯ್ಯ ಕಟ್ಟೇರ, ಡಾ. ಎಂ. ಮಂಜಣ್ಣ**

**DOI:** https://doi.org/10.22271/24545813.2021.v7.i1a.1010

**ಪೀಠಿಕೆ**

ಇಂಡಿಯಾದ ನಂಬಿಕೆಗಳಲ್ಲಿ ಪ್ರಧಾನವಾಗಿ ಕಾಣುವ ದ್ವಂದ್ವವೆಂದರೆ ಚೇತನ ಮತ್ತು "ಅಚೇತನಗಳಲ್ಲಿ ಬೌದ್ಧಿಕ ಮತ್ತು ಅಬೌದ್ಧಿಕ ಎಂಬ ತತ್ವ ಪ್ರಭೇದಗಳುಂಟು. ನಮ್ಮ ಮನಸಿನಲ್ಲಿ ಉದ್ಭವಿಸುವ ಪ್ರತಿಯೊಂದು ಭಾವನೆಗೂ ಅದಕ್ಕೆ ಅನುರೂಪವಾದ ಒಂದು ಬಾಹ್ಯವಸ್ತುವಿಗೂ ನಿಕಟವಾದ ಸಂಬಂಧವಿದ್ದೇ ಇರುವುದಲ್ಲದೇ, ಆ ವಸ್ತುವಿಗೆ ಯಥಾರ್ಥತೆಯೂ ಉಂಟೆಂಬುದು ನಮ್ಮ ನಿತ್ಯಾನುಭವ. ಭಾವನೆ ಮತ್ತು ವಸ್ತು ಈ ಎರಡು ಯಥಾರ್ಥಗಳಿಗೂ ಒಂದು ವಿಧವಾದ ಕಾರ್ಯಕಾರಣ ಸಂಬಂಧವಿದೆ. ಭಾವನೆಯು ಉದ್ಭವವಾಗುವುದಕ್ಕೆ ಮುಂಚೆಯೇ ವಸ್ತುವು ಇರುವುದು. ಆದುದರಿಂದ ವಸ್ತುವಿಗೆ ಸ್ವತಂತ್ರ ಅಸ್ತಿತ್ವವುಂಟು. ಬೌದ್ಧಿಕ ವ್ಯಾಪಾರವು ಉಂಟಾಗಲು ಆ ವಸ್ತುವಿನ ಪೂರ್ವಭಾವೀ ಅಸ್ತಿತ್ವವು ಒಂದು ನಿಬಂಧನೆಯೂ ಹೌದು. ಜೀವನದ ಈ ಅನುಭವ ಕಾಲಾನುಕಾಲದಿಂದಲೂ ಯಾವ ಸವಾಲನ್ನೂ ಎದುರಿಸದೆ ಉಳಿದು ಬಂದಿದೆ. ಅಲ್ಲದೆ ಬಾಹ್ಯ ಪ್ರಪಂಚದೊಡನೆ ನಮ್ಮ ವ್ಯವಹಾರವೆಲ್ಲಕ್ಕೂ ಇದು ಆಧಾರ. ಪ್ರತ್ಯಕ್ಷಾನುಭವವು ಸಾಧ್ಯವಾದಾಗ ಭೌತಪ್ರಪಂಚವು ನಮ್ಮ ಬಾಹ್ಯೇಂದ್ರಿಯಗಳ ಮೂಲಕ ಜ್ಞಾನಗೋಚರವಾಗುವುದು"[1]. ಸಮುದಾಯದ ಸಮಷ್ಠಿ ಜೀವನವು ಬಹುನೆಲೆಗಳಲ್ಲಿ ವಿರಾಟ್‌ಸ್ವರೂಪವನ್ನು ಕಾಣಿಸಿಕೊಳ್ಳುತ್ತದೆ. ಆದಿಮನೆಲೆಯು ಪ್ರಬಲ ಬೇರುಗಳನ್ನು ನೆಲೆಯೂರಿಸಿಕೊಂಡಿದ್ದರೂ, ಕಾಲಚಲನೆಯ ಹಿನ್ನೆಲೆಯಲ್ಲಿ ಒದಗಿ ಬಂದ ಆಕ್ರಮಣಕಾರಿ ಅಂಶಗಳಿಗೆ ತನ್ನನ್ನು ತೆರೆದುಕೊಳ್ಳುತ್ತದೆ. ಈ ಕಾರಣದಿಂದಾಗಿ ನಂತರದ ವರ್ಗೀಕೃತ, ಶ್ರೇಣೀಕೃತ ಆಯಾಮಗಳು ಜನತೆಯಲ್ಲಿ ಹಾಸುಹೊಕ್ಕಾದರೂ ತನ್ನ ಮೂಲ ಆಶಯಗಳನ್ನದು ಸಂಪೂರ್ಣವಾಗಿ ನೀಗಿಸಿಕೊಳ್ಳಲಾರದು.

**ವೈಧಾನಿಕತೆಗಳ ನಂಬಿಕೆ**

ನಿರ್ದಿಷ್ಟ ಸಂಸ್ಥೆಯೊಳಗಿನ ಸಾಮುದಾಯಿಕ ಲೋಕದೃಷ್ಟಿಯನ್ನು ಆಚರಣೆ ಮತ್ತು ನಂಬಿಕೆಗಳು ರೂಪಿಸುವುದಲ್ಲದೆ ಕ್ರಿಯಾತ್ಮಕ ಸಂಚರಿತ ರೂಪವನ್ನಾಗಿ ರೂಢಿಸುತ್ತವೆ. ಈ ರೂಢಿಗತ ರೂಪಗಳು ಲೋಕದೃಷ್ಟಿಯನ್ನು ಬಲವಾಗಿ ಪ್ರಭಾವಿಸಿದಂತೆಲ್ಲಾ ಸಂಸ್ಕೃತಿ ಸಂಕೀರ್ಣವಾಗುತ್ತದೆ. ಈ ಸಂಕೀರ್ಣತೆಯ ಅರ್ಥಗಳು ಅಮೂರ್ತ ಮತ್ತು ಸಾಂಕೇತಿಕವಾದರೂ ಆಚರಣೆಗಳ ಮೂಲಕ ಸಂವಹನಗೊಳ್ಳಲು ಯತ್ನಿಸುತ್ತಾ ಚಲನಶೀಲವಾಗುತ್ತವೆ. ಸೀಮಿತ ಮತ್ತು ವಿಶ್ವವ್ಯಾಪಿಯೆಂಬ ಎರಡು ದ್ವಂದ್ವಾತ್ಮಕ ಅವಿರೋಧಿ ಗುಣಗಳು ನಂಬಿಕೆಯ ನಿರ್ದಿಷ್ಟ ಗುಣವನ್ನು ಅವಲಂಬಿಸಿರುತ್ತವೆ. ವಿಶೇಷತಃ ನಂಬಿಕೆಯೇ ಸಾಂಸ್ಕೃತಿಕ ಆವರಣದ ಲೋಕದೃಷ್ಟಿಯಾಗಿರಲು ಸಾಧ್ಯ. ಅನನ್ಯತೆಯ ಪ್ರಶ್ನೆಯು ಮಾತ್ರ ಸೀಮಿತವೇ. ಈ ಕಾರಣಕ್ಕೆ ನಂಬಿಕೆಗೆ ಅಮೂರ್ತ, ಅನಿರ್ವಚನೀಯ ಅರ್ಥವಿದ್ದರೂ ನೋಟ ಮತ್ತು ಅನುಭವದಲ್ಲಿ ಅದರ ಇರುವಿಕೆ ದಕ್ಕುತ್ತದೆ. ಕ್ರಿಯಾತ್ಮಕ ವ್ಯಾಖ್ಯಾನಕ್ರಮಕ್ಕೂ, 'ಸಂಧಿಸುವಿಕೆಯ ವಿಭಜನೆಯ ಪ್ರಮೇಯ'ಕ್ಕೂ ಅಂತರ್ಗಾಮಿಯಾದ ಸಂಬಂಧಗಳೇನಾದರೂ ಇವೆಯೇ ಎಂದು ನಾವು ಪುನರ್ ಪರೀಕ್ಷಿಸಿಕೊಳ್ಳಬಹುದು. ಇದನ್ನು ಕೇವಲ ಸಮುದಾಯದ ವ್ಯಾಪ್ತಿಗೆ ಸೀಮಿತಗೊಳಿಸುವುದಾದರೆ, ಎರಡು ಬಗೆಯಾಗಿ ಗುರುತಿಸಲು ಯತ್ನಿಸಬಹುದು. 1. ನಂಬಿಕೆಯು ರೂಪಿಸುವ ಸಮುದಾಯದ ಸಾಂಸ್ಕೃತಿಕ

[1] ಅನು: ಪುಟ್ಟಪ್ಪ. ಕೆ.ವಿ. ಪ್ರ. ಸಂ. ಯುಗಯಾತ್ರೀ ಭಾರತೀಯ ಸಂಸ್ಕೃತಿ. ಸಂಪುಟ.3 1971, ಪುಟ.349

ಜಗತ್ತು. 2. ಸಮುದಾಯ ಪುನರ್ ನವೀಕರಿಸುವ ನಂಬಿಕೆಯ ಲೋಕದೃಷ್ಟಿ. ಈ ಎರಡು ಬಗೆಗಳು ಪರಸ್ಪರಾವಲಂಬನೆಯ ಅಂಶಗಳಂತೆ ಕಂಡರೂ ವೈಧಾನಿಕತೆಗಳ ರಾಜಕೀಯಗಳ ವಸಾಹತುವಿನ ಆದಿಮ–ಆಧುನಿಕ ಆಯಾಮಗಳಿಗೆ ಸಂಬಂಧಿಸಿದವುಗಳು.

ಆದಿಮ ಮಾನವನ ಆದಿಮ ಭೌತವಾದದ ಆಚರಣಾ ಲೋಕದೃಷ್ಟಿ ಸಾಮಾಜೀಕರಣಗೊಂಡ ಪ್ರಕ್ರಿಯೆಗೆ ನಂಬಿಕೆ ಹೇಗೆ ಮೂಲಮಾನವೋ, ಹಾಗೆಯೇ ಸಾಮಾಜಿಕ ಮೌಲ್ಯ ಮತ್ತು ತತ್ವಚಿಂತನೆಗೆ ನಂಬಿಕೆ ಪ್ರಮುಖವಾದ ಆಕರ. ಸಮಾಜವಿಜ್ಞಾನದ ವಿದ್ಯಾರ್ಥಿಗೆ ಈ ಆಕರ ದ್ವಂದ್ವಾತ್ಮಕ ನೆಲೆಯಲ್ಲಿ ಬಹುಮುಖ್ಯವಾಗುತ್ತದೆ. ಒಂದೇ ಕಾಲದ ಭಿನ್ನ ತತ್ವಶಾಸ್ತ್ರೀಯ ಜಿಜ್ಞಾಸೆಗೆ ನಂಬಿಕೆಗಳೇ ಆಧಾರಗಳೆಂಬುದನ್ನು 'ಮನಃಶಾಸ್ತ್ರೀಯ ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ'ಗಳು ಪ್ರಸ್ತುತಪಡಿಸಿವೆ. ನಿರ್ದಿಷ್ಟ ಮನಸ್ಥಿತಿಯ ಒಳಗೊಳ್ಳುವಿಕೆಯ ಪರಿಕರಗಳೆಂದು ಆದಿಮ ಮನುಷ್ಯ ಭಾವಿಸುವುದೂ ಕೂಡ ಈ ನೆಲೆಯಲ್ಲಿ. ಚಾರಿತ್ರಿಕ ಗತಿತಾರ್ಕಿಕತೆಯಲ್ಲಿ ಇದು ಸಾಮಾಜಿಕ ಪರಿಣಾಮ; ಮತ್ತು ಅಪೇಕ್ಷಿತ ಉತ್ಪಾದನೆಯ ಸಂಘಟಿತ ಅನುಸರಣೆ. ಬೇವಿನಕಟ್ಟಿಯವರು ಆರಂಭದಲ್ಲೇ ಪ್ರಸ್ತಾಪಿಸುವಂತೆ "ಮಾನವ ಸಮಾಜದ ಅಸ್ತಿತ್ವಕ್ಕೆ ನಂಬಿಕೆ ಮೂಲವಸ್ತು. ನಂಬಿಕೆಯನ್ನು ಆಧಾರವಾಗಿಟ್ಟುಕೊಂಡು ಮಾನವ ಸಮಾಜದ ಇತರ ಅಂಶಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ನಂಬಿಕೆಯಲ್ಲಿ ಒಳ್ಳೆಯದು ಕೆಟ್ಟದು ಎಂಬುದು ಚಾರಿತ್ರಿಕ ಪರಿಣಾಮ"[2]. ಬೇವಿನಕಟ್ಟಿಯವರು ನಂಬುವಂತೆ, ಒಂದು ಕಾಲಘಟ್ಟದ ಆರ್ಥಿಕನೆಲೆಗಳು ನಂಬಿಕೆಯನ್ನು ರೂಪಿಸುತ್ತವೆ. ಆರ್ಥಿಕನೆಲೆಗಳಿಂದ ನಂಬಿಕೆಗಳನ್ನು ವಿಶ್ಲೇಷಣೆ ಮಾಡುವುದಷ್ಟೇ ಈ ಕೃತಿಯ ಮುಖ್ಯ ಉದ್ದೇಶವಲ್ಲ. ಬಹುಶಿಸ್ತಿಯ ಮತ್ತು ಅಂತರ್‌ಶಿಸ್ತೀಯ ಮಾನದಂಡಗಳ ಮೂಲಕ ನಂಬಿಕೆಗಳ ಸಮಗ್ರ ಅವಲೋಕನ ಮಾಡುವುದು ಈ ಕೃತಿಯ ಮುಖ್ಯ ಉದ್ದೇಶ. ಆದರೂ ಲೇಖಕರು ಪ್ರಧಾನವಾಗಿ ಬಳಸಿಕೊಳ್ಳುವುದು ಮನಃಶಾಸ್ತ್ರೀಯ ಹತಾರಗಳನ್ನು.

ನಂಬಿಕೆಗೆ ಸಾಮಾಜಿಕ ಮುಖವೊಂದು ಅಗತ್ಯದ ಉತ್ಪಾದಿತ ಘಟಕವಾದರೂ, ಧರ್ಮ ಅದರ ಅತ್ಯಂತಿಕ ನಡೆಯಾಗಿಬಿಡುತ್ತದೆ. ನಂಬಿಕೆಯೇ ಧರ್ಮದ ಬಲವಾದ ಅಸ್ತ್ರವಾದಂತೆಲ್ಲಾ ರಾಜಕೀಯಾರ್ಥಿಕ ನಿಯಮವಾಗಿ ಮಾರ್ಪಾಡು ಪಡೆಯುವ ಸಾಧ್ಯತೆ ಹೆಚ್ಚು. ಹೀಗಾಗಿಯೇ ಮಂಜುನಾಥ ಬೇವಿನಕಟ್ಟಿಯವರು ಮೊದಲ ಅಂಶವಾದ ನಂಬಿಕೆ ರೂಪಿಸುವ ಸಮುದಾಯದ ಸಾಂಸ್ಕೃತಿಕ ಸಮಗ್ರ ಪ್ರಮೇಯಕ್ಕೆ ಪ್ರಾಧಾನ್ಯತೆ ಕೊಡುತ್ತಾರೆ. ಅಭಿನ್ನವಾಗಿ ಆದಿಮ–ಆಧುನಿಕತೆಯ ನಂಬಿಕೆಯು ವರ್ತಮಾನವನ್ನು ಹೇಗೆ ನಿಭಾಯಿಸಿ ರೂಪಿಸುತ್ತದೆ ಎಂಬುದನ್ನು ಸ್ಪಷ್ಟವಾಗಿಯೇ ಗುರುತಿಸುತ್ತಾರೆ. "ಒಂದು ಕಾಲದಲ್ಲಿ ಕೆಳವರ್ಗ ಮತ್ತು ಅಲ್ಪಸಂಖ್ಯಾತರು ಒಂದಾಗಬೇಕು ಎಂಬ ನಂಬಿಕೆ ಇರಲಿಲ್ಲ. ಯಾವ ಮನಸಿನೊಳಗೂ ಅದು ಸುಳಿಯುವ ಸ್ಥಿತಿ ಇರಲಿಲ್ಲ. ಅವರು ಆ ಕಾಲದ ಮಹಿಮೆಯಿಂದಾಗಿ ತಾವು ಸೇವೆ ಮಾಡಲಿರುವುದೆಂದೇ ತಿಳಿದಿದ್ದರು. ತಮ್ಮ ಒಗ್ಗಟ್ಟಿಗೆ ಅರ್ಥವಿದೆಯೆಂದು ಅವರು ತಿಳಿದಿರಲಿಲ್ಲ. ಈ ಪರಿಸ್ಥಿತಿಯನ್ನು 20ನೇ ಶತಮಾನಕ್ಕೆ ಹೋಲಿಸಿದರೆ, ತದ್ವಿರುದ್ಧ ಪರಿಸ್ಥಿತಿ ಕಂಡುಬರುತ್ತದೆ. ಈಗ ವ್ಯಕ್ತವಾಗಿ ಮತ್ತು ಅವ್ಯಕ್ತವಾಗಿ ಓಟಿನಲ್ಲೂ ವ್ಯಕ್ತವಾಗಿ ಪ್ರತಿಭಟನೆಯಲ್ಲೂ ತೋರಿಸುತ್ತಾ ಬಂದಿದ್ದಾರೆ. ಇದರ ಪರಿಣಾಮವಾಗಿ ಮೇಲ್ವರ್ಗಗಳು ತತ್ತರಿಸಿ ಗಡಿಬಿಡಿಗೊಂಡು ತಾವು ಯಜಮಾನರೆಂಬ ಹಳೆಯ ನಂಬಿಕೆಯನ್ನು ಕಳೆದುಕೊಳ್ಳುತ್ತಾ ಹೊಸದಾಗಿ ಸಂಘಟಿತರಾಗಿ ಸಮಕಾಲೀನ ನಂಬಿಕೆಗಳನ್ನು ಸೃಷ್ಟಿಸಿಕೊಂಡು ಒಂದಾಗುವುದರತ್ತ ಈಗ ಮುನ್ನಡೆದಿದ್ದಾರೆ"[3]. ಹೀಗಾಗಿ ಪ್ರಸ್ತುತ ಸಂಶೋಧನೆಗೆ ಶೈಕ್ಷಣಿಕ ಅಗತ್ಯಗಳು ಅಷ್ಟೇ ಅಲ್ಲದೆ ರಾಜಕೀಯ ಆವರಣ ರೂಪಿಸುವ ಮನೋನೆಲೆಯೂ ಮುಖ್ಯವಾಗಿದೆ. ಅದರ ಅಗತ್ಯಕ್ಕಾಗಿ ಭೂತದ ನಂಬಿಕೆಯ ಒಟ್ಟು ಅರ್ಥವಿನ್ಯಾಸವನ್ನು ವರ್ತಮಾನದ ಮನೋಪರಿಭಾಷೆಯ ಸಾಂಸ್ಕೃತಿಕ ರಾಜಕಾರಣದ ಪದವಿವರಣಕ್ಕೆ ಸಂಲಗ್ನಗೊಳಿಸುತ್ತಾರೆ.

ಮಾನವಕುಲಶಾಸ್ತ್ರವು ಆದಿಮ ಮನುಷ್ಯನ ಬದುಕನ್ನು ಚಾರಿತ್ರಿಕವಾಗಿ, ವೈಜ್ಞಾನಿಕವಾಗಿ ದಾಖಲಿಸಲು ಪ್ರಯತ್ನಿಸುತ್ತದೆ. ಬಹುಶಃ ಈ ಕಾರಣಕ್ಕೆ ಇರಬೇಕು ಎರಿಕ್‌ವುಲ್ಫ್ 'ಮಾನವಶಾಸ್ತ್ರ ಮಾನವಿಕಗಳ ಪೈಕಿ ಅತ್ಯಂತ ವೈಜ್ಞಾನಿಕ; ವಿಜ್ಞಾನಗಳ ಪೈಕಿ ಅತ್ಯಂತ ಮಾನವೀಯ' ಎನ್ನುತ್ತಾನೆ. ನಂಬಿಕೆಗಳು ಸಾವಯವ ಏಕತೆಯನ್ನು ಬಿಂಬಿಸುವ ಸಮಾನಂತರ ಜನಾಂಗಗಳ ವಿವರಣೆಗಳನ್ನು ನಿರ್ದಿಷ್ಟ ದೃಷ್ಟಿಕೋನವೊಂದರಲ್ಲಿ ಪ್ರತಿಪಾದಿಸುತ್ತವೆ. 'ನಂಬಿಕೆಗಳ ನಿಜವಾದ ಮೌಲ್ಯನಂಬಿಕೆಗಳಿಗು ಅವುಗಳ ವಿಶ್ಲೇಷಣಾ ಮೌಲ್ಯಕ್ಕೂ ವ್ಯತ್ಯಾಸ ಇದ್ದೇ ಇದೆ'ಯೆಂದು ಈವಾನ್ಸ್ ಪ್ರಿಚಾರ್ಡ್ ಕೂಡ ನಂಬಿದ್ದರು. ಮಾನವನ ನಂಬಿಕೆಯು ಮಾತ್ರವಲ್ಲದೆ 'ಯಾವುದೇ ಸಂಗತಿಯು ಭಿನ್ನವಾದ ಎರಡು ದ್ವಂದ್ವಾತ್ಮಕ ಮೌಲ್ಯಗಳನ್ನು ಹೊಂದಿರುತ್ತದೆ. ಅದರ ನಿಜವಾದ ಗತಮೌಲ್ಯಕ್ಕೂ, ಅಧ್ಯಯನದ ವಿಶ್ಲೇಷಣಾತ್ಮಕ ಮೌಲ್ಯಕ್ಕೂ ಗತಿಶೀಲ ಅಂತರ ಇರುತ್ತದೆ. ಇದನ್ನು ಹಾದು ಬಂದ ಸಮಾಜದ ಸಂಸ್ಥೆಗಳಲ್ಲಿ ಸಹಜವಾಗಿಯೇ ಪರಸ್ಪರ ಸಂಬಂಧ ಇರಿಸಿಕೊಂಡಿರುತ್ತವೆ. ಒಂದು ಸಮಾನ ಪ್ರಕಾರದ ಸಂಸ್ಥೆಯ ಬದಲಾವಣೆಯು ಇತರೆ ಸಮಾನ ಪ್ರಕಾರದ ಸಂಸ್ಥೆಯಲ್ಲೂ ಸಾಧ್ಯವಾಗುತ್ತದೆ. ಇದಲ್ಲದೆ ಪ್ರತಿಯೊಂದು ಬದಲಾದ ಸಂಸ್ಥೆಯೂ ಮಾನವ ವಿಕಾಸದಲ್ಲಿ ಪ್ರಮುಖವಾದ ಕೊಡುಗೆಯನ್ನು ಸಾಧ್ಯವಾಗಿಸಿರುತ್ತದೆ' ಇದು ರ್‍ಯಾಡ್ ಕ್ಲಿಪ್ ಬ್ರೌನ್ ಹೇಳುವ ಪ್ರಮೇಯ. ಈ ಪ್ರಮೇಯದಲ್ಲಿ ಎರಡು ಸಾಧ್ಯತೆಗಳು ಕಾಣಿಸುತ್ತವೆ. ಒಂದು. ಸಮಾನ ಪ್ರಕಾರದ ಸಂಸ್ಥೆಗಳು ಏಕಕಾಲದಲ್ಲಿ ಸಮಾನ ಬದಲಾವಣೆಗೆ ಒಳಗಾಗುತ್ತವೆ ಎಂಬುದು. ಈ ಮಾತನ್ನು ಒಪ್ಪಲು ಸಾಧ್ಯವಿಲ್ಲ. ಚಾರಿತ್ರಿಕ ಭೌತವಾದದ ಮೂಲಕ ನೋಡಿದರೆ, ಇದರ ಮಿತಿ ಸ್ಪಷ್ಟ. ಏಕಕಾಲದ ಬದಲಾವಣೆ ಜಗತ್ತಿನ ಯಾವ ಸಂಸ್ಥೆಯಲ್ಲೂ ಘಟಿಸುವುದಿಲ್ಲ. ಬ್ರೌನ್ ಅವರ ಥಿಯರಿ ಸ್ಪಷ್ಟವಾಗಿ ನನಗೆ ಅರ್ಥವಾಗದೇ ಇರಬಹುದು. ಎರಡು. ಬದಲಾದ ಪ್ರತಿಯೊಂದು ಸಂಸ್ಥೆಯೂ ಪ್ರಮುಖವಾದ ಕೊಡುಗೆಯೊಂದನ್ನು ನೀಡಿರುತ್ತವೆ. ಈ ಅಂಶ ತೀರಾ ಮುಖ್ಯವಾದುದು. ಇಂಡಿಯಾದ ಸಂಕರ ಚರಿತ್ರೆಯ ವಿಸ್ಮೃತಿ ಮತ್ತು ವರ್ತಮಾನದ ಅಂಶಗಳೊಂದಿಗೆ ತೌಲನಿಕ ನೋಟವೊಂದು ಸಾಧ್ಯವಾದರೆ ಇದು ಸ್ಪಷ್ಟ. ಬ್ರೌನ್ ಅವರಿಗಿರುವ ಮುಖ್ಯ ಸೆಕ್ಯುಲರ್ ಚಿಂತನೆ, ಒಂದು ಭಾಗದಲ್ಲಿ ವಾಸವಾಗಿರುವ ಎಲ್ಲಾ ಸಮುದಾಯಗಳ ಸಮಗ್ರ ಬದುಕನ್ನು ಕಟ್ಟುವಾಗ ಸ್ಮೃತಿಗೆ ಸಂದುಹೋದ ಅಂಶಗಳ ಬಗ್ಗೆ ಯೋಚಿಸಬೇಕು; ಮತ್ತು ಅದನ್ನು ಪ್ರಧಾನ ಅಧಿಕಾರಶಾಹಿಯ ಸಮುದಾಯದ ಆಚೆಯ ಮೈಕ್ರೋ ಕಮ್ಯೂನಿಟಿಯ ನೆಲೆಯಿಂದ ನೋಡಬೇಕು ಅನ್ನುವುದು. ಕೇವಲ ಜಾತಿನೆಲೆಯನ್ನು ಮಾತ್ರವಲ್ಲದೆ ಜಾತಿಗಳ ನೆಲೆಯಿಂದಲೂ ಆಲೋಚನೆ ಗಟ್ಟಿಗೊಳ್ಳಬೇಕು ಅನ್ನೋದು. ಮತ್ತೆ ಮರೆಗೆ ಸಂದಿರುವ ಕಲೆ, ಸಾಹಿತ್ಯ, ಆಚರಣೆಗಳ ಭೌತಿಕ ಅಂಶಗಳ ಮೂಲಕ ಹಿಂಚಲನೆ ಸಾಧ್ಯವಾಗಬೇಕು ಎಂಬುದು. ಆತನ ಕಾಲಘಟ್ಟವು ಜಗತ್ತಿನ ಸಂದಿಗ್ಧ ಸಂಕ್ರಮಣದಿಂದ ಕೂಡಿದ ಕಾರಣ, ಆತನ ಥಿಯರಿಯ ಮೇಲೆ ಗಾಢವಾದ ಪರಿಣಾಮ ಬೀರಿದೆ ಎನ್ನುವ ಅನುಮಾನಕ್ಕೆ ಆತನ ಕೆಲವು ಅತಂಕಪೂರಿತ ಮಾತುಗಳು

[2] ಮಂಜುನಾಥ ಬೇವಿನಕಟ್ಟೆ. ಕನ್ನಡ ಜನಪದ ನಂಬಿಕೆಗಳು, 2007, ಪುಟ.2

[3] ಅದೇ. ಪುಟ.25

ಸಾಕ್ಷ್ಯಗಳಂತಿವೆ. ಇಂಡಿಯಾಕ್ಕೆ ಸ್ವತಂತ್ರ ಬಂದರೂ ಎರಡು ಭಾಗವಾಗುವ ಸಂಭವದ ಪೂರ್ವಸೂಚನೆಯಲ್ಲಿ ಆತನ ಥಿಯರಿಯನ್ನು ಅರ್ಥಮಾಡಿಕೊಂಡರೆ ಆತನ ಆತಂಕ ಸಹಜ ಅನಿಸಿಬಿಡುತ್ತದೆ.

ನಂಬಿಕೆಯು ವೈಯಕ್ತಿಕ ಆಲೋಚನೆಯನ್ನು ಮೀರಿ ಕುಟುಂಬ, ಸಮಾಜ ಮತ್ತು ದೇಶದ ಆಚೆಗೆ ಜನಾಂಗಿಯ ನೆಲೆಗೆ ಬಂದು ಸಾರ್ವತ್ರಿಕ ಗುಣದ ನೆಲೆಯನ್ನು ಪ್ರಸ್ತುತಪಡಿಸುತ್ತದೆ. ಗುಣದ ನೆಲೆಯು ಕೇವಲ 'ಹರಡುವಿಕೆಯ ತಿರಸ್ಕೃತತೆ'ಯ ಪ್ರಮಾಣಗಳ ಮೇಲಿನದಲ್ಲ. 'ಸಾಂಸ್ಕೃತಿಕ, ಸಾಮಾಜಿಕ ವಿಭಜಿತತೆಯ ಅಧಿಕೃತತೆ ಮತ್ತು ಚಹರೆಯ ಗುರುತಿನ ಅನನ್ಯತೆಯ ಕೈಗಡದ ನೆಲೆ'ಯದು. ಸಾಧ್ಯವಾದರೆ ಇದನ್ನು 'ಸಾಮಾಜಿಕ ಅನುಮಾನಿತ ರೂಢ ಮನೋನೆಲೆ' ಎಂದು ಕರೆಯಬಹುದು. ಬೇವಿನಕಟ್ಟೆಯವರು ಇದನ್ನು 'ಸಾಂಸ್ಕೃತಿಕ ಅಗತ್ಯದ ನಿರೂಪಣೆ'ಯ ಕೇಂದ್ರದಿಂದ ವಿವರಿಸಲು ಯತ್ನಿಸುತ್ತಾರೆ. ಕ್ರಿಯಾತ್ಮಕ ವ್ಯಾಖ್ಯಾನಗಳು ರೂಪುಗೊಳ್ಳುವಾಗ ಇರುವ ಸಾಮಾಜಿಕ ನಂಬಿಕೆಯ ಬದ್ಧತೆಯನ್ನು ವರ್ತಮಾನದ ಕ್ರಿಯಾತ್ಮಕ ವ್ಯಾಖ್ಯಾನಗಳಾಗಿ ಹೇಗೆ ರೂಪಿಸಬಹುದು ಎಂಬುದನ್ನು ಅರ್ಥೈಸಲು ಬೇವಿನಕಟ್ಟೆಯವರು ಜನಾಂಗಿಕ ಮನೋನೆಲೆಯನ್ನು (Ethno physical Sence) ಅನುಸರಿಸುತ್ತಾರೆ. "ಪುರಾತನ ಕಾಲದ ನಂಬಿಕೆಯನ್ನು ಬಿಡದವರು ಕ್ರೂರವಾಗುತ್ತಾರೆ. ಈ ಕಾರಣಕ್ಕಾಗಿ ತಮ್ಮ ಸಮಕಾಲೀನವಾದ ಮನಸ್ಸನ್ನು ಕಳೆದುಕೊಳ್ಳಬೇಕೆಂದು ಬೇರೆಯವರ ಕಣ್ಣಿನಲ್ಲಿ ಅಪರಾಧಿಗಳಾಗುತ್ತಾರೆ. ಪುರಾತನ ನಂಬಿಕೆಯೇ ಸರಿ ಮತ್ತು ಶ್ರೇಷ್ಠ ಎಂದು ನಂಬಿದ ಸಮಾಜ ಸಮಕಾಲೀನವಾಗುವುದಿಲ್ಲ. ಹಿಂದಿನದರಲ್ಲಿ ಆಯ್ಕೆಯನ್ನು ಮತ್ತು ಮುಂದಿನ ಜೀವನದಲ್ಲಿ ಸೃಷ್ಟಿ ಸಾಧ್ಯತೆಯನ್ನು ಅನುಸರಿಸಬೇಕಾಗುತ್ತದೆ. ತಮ್ಮ ನಂಬಿಕೆಯನ್ನು ಹೀಗೆ ಸಮಕಾಲೀನವಾಗಿ ಉಳಿಸಿಕೊಳ್ಳುವವರು ಶತ್ರುಗಳ ಸ್ಥಾನದಲ್ಲಿ ಬಂದು ನಿಲ್ಲುತ್ತಾರೆ. ಹೊಸದಾಗಿ ನಂಬಿಕೆಗಳನ್ನು ಸೃಷ್ಟಿಸಿಕೊಳ್ಳುವವರು ಜನರ ದೃಷ್ಟಿಯಲ್ಲಿ ಪ್ರಗತಿಪರರೆನಿಸಿಕೊಳ್ಳುತ್ತಾರೆ"[4]. ಸಾಂಸ್ಕೃತಿಕ ವಿಕಾಸವು ನಂಬಿಕೆಯ ಮೂಲನೆಲೆಯನ್ನು ಹಾಗೂ ಹುಟ್ಟಿನ ಆಶಯವನ್ನು ಪುನರ್ ಮೌಲೀಕರಿಸುವ ಮತ್ತು ಪುನರ್ ಮೌಲೀಕರಿಸಬೇಕಾದ ಪ್ರಕ್ರಿಯೆಯಿದು. ನಂಬಿಕೆ ಜಡವಾಗಿ ಮೂಲಭೂತ ಸಂಪ್ರದಾಯವಾದಾಗ ಪ್ರಯೋಗಶೀಲತೆಯು ಮಾನವ ವಿರೋಧಿಯಾಗಿ ಮಾರ್ಪಾಡಬಲ್ಲದು ಎಂಬುದನ್ನೂ ಬೇವಿನಕಟ್ಟೆಯವರು ನಿರೂಪಿಸುತ್ತಾರೆ.

ನಂಬಿಕೆಯೆಂಬುದು ವ್ಯಕ್ತಿಯೋರ್ವನ ಅನುಭವದ ಅಂಗೀಕಾರ ಮತ್ತು ನಿರಾಕರಣೆಯನ್ನು ಸಾರ್ವತ್ರಿಕ ಆಯ್ಕೆ ಹಾಗೂ ಅಂಗೀಕಾರದ ಪರೀಕ್ಷೆಗೆ ಬಿಟ್ಟ ಸ್ಫುಟವಾದ ಭಾವನೆ. ಈ ಕಾರಣಕ್ಕೆ ನಂಬಿಕೆಯೆಂಬುದು ನೆಚ್ಚಿಕೆಯ ಭಾವವೆಂದು ಬೆಗಾಟ್ ಹೇಳುತ್ತಾನೆ. ನಂಬಿಕೆಯನ್ನು ಕುರಿತು ಅನೇಕ ಮನಃಶಾಸ್ತ್ರಜ್ಞರು ಮಾತಾಡಿದ್ದಾರೆ. ಪ್ರಸ್ತುತ ಲೇಖನಕ್ಕೆ ಯೂಂಗ್ ಮತ್ತು ಸಿಗ್ಮಂಡ್ ಫ್ರಾಯ್ಡ್‌ನ ಅಭಿಮತಗಳನ್ನು ಮಾತ್ರ ಅನುಷಂಗಿಕವಾಗಿ ಬಳಸಿಕೊಳ್ಳುತ್ತೇನೆ. ಇದರಾಚೆ ಬೇವಿನಕಟ್ಟೆಯವರು ಬೆಗಾಟ್‌ನ ವ್ಯಾಖ್ಯಾನವನ್ನು ಒಪ್ಪುತ್ತಾರಾದರೂ ಮಾನವಕುಲಶಾಸ್ತ್ರವನ್ನು ಮನಃಶಾಸ್ತ್ರೀಯ ನೆಲೆಯಲ್ಲಿ ವಿಶ್ಲೇಷಿಸಿದ ಸಿಗ್ಮಂಡ್ ಫ್ರಾಯ್ಡ್‌ನ ಅಭಿಪ್ರಾಯವನ್ನು ಅಪ್ರಜ್ಞಾಪೂರ್ವಕವಾಗಿ ಸ್ವೀಕರಿಸಿದ್ದಾರೆ. "ಜನಪದ ನಂಬಿಕೆಯು ಅಭಯ ಮತ್ತು ನೆಚ್ಚಿಕೆಯ ಒಂದು ಮಾನಸಿಕ ಸ್ಥಿತಿ. ಇದು ಸಾಂಪ್ರದಾಯಕವಾಗಿ ಅಂಗೀಕೃತವಾದ ಪರಿಕಲ್ಪನೆಯಾಗಿದ್ದು ಸಾಮಾನ್ಯವಾಗಿ ಅದು ಕಾರಣ ಮತ್ತು ಪರಿಣಾಮದ ಸಂಬಂಧವನ್ನು ಹಾಗೂ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ನಂಬಿಕೆಗಳನ್ನು ಒಳಗೊಂಡಿರುತ್ತದೆ. ಮನಸ್ಸು ಅನುಭವಗಳ ಮೂಲಕ ಬೆಳೆಯುತ್ತಾ ಹಲವಾರು ನಂಬಿಕೆಗಳನ್ನು ಸಂಪಾದಿಸಿಕೊಳ್ಳುತ್ತಾ ಅವುಗಳಿಗೆ ತಾರ್ಕಿಕವಾಗಿಯೋ ಅತಾರ್ಕಿಕವಾಗಿಯೋ ಒಂದು ವ್ಯವಸ್ಥಿತ ರೂಪ ಕೊಡುತ್ತಾ ಹೋಗುತ್ತದೆ"[5]. ಫ್ರಾಯ್ಡ್ ಆದಿಮ ಸಮುದಾಯ ಮನಸ್ಥಿತಿ ರೂಪಿಸಿದ ನಂಬಿಕೆಗಳನ್ನು ವಿಶ್ಲೇಷಿಸುವಾಗ ಟೊಟೆಂ ಮತ್ತು ಟ್ಯಾಬೂ ಎಂಬೆರಡು ಅಭಿನ್ನ ಸಾಮಾಜಿಕ ಸ್ವರೂಪಗಳನ್ನು ನೀಡುತ್ತಾನೆ. ಆನಂತರ ಈ ನಂಬಿಕೆಗಳು ರೂಪಿಸಿದ ಸಮಾಜದ ಸಮಗ್ರ ನೋಟವನ್ನು ಅರಿಯಲು ಯತ್ನಿಸುತ್ತಾನೆ.

ವ್ಯಕ್ತಿನೆಲೆಯ ಅನುಭವ ಸಾಮಾಜಿಕ ಅಂಗೀಕಾರ ಮತ್ತು ನಿರಾಕರಣೆಯ ಸಾರ್ವತ್ರಿಕರಣಗೊಳ್ಳುವುದನ್ನು ಫ್ರಾಯ್ಡ್ ಟೊಟೆಂ ಮತ್ತು ಟ್ಯಾಬೂಗಳ ನೆಲೆಯಲ್ಲಿ ನಿರೂಪಿಸುತ್ತಾನೆ. ಇವೆರಡು ಅಭಿನ್ನ ಸಾಮಾಜಿಕ ಸ್ವರೂಪಗಳೆಂದರೂ, ಪ್ರತ್ಯೇಕ ಮಾನದಂಡಗಳನ್ನಂತೂ ಧಾರಣೆ ಮಾಡಿಕೊಂಡಿವೆ. ಸಾಂಸ್ಕೃತಿಕ ಮಾನವಕುಲಶಾಸ್ತ್ರ, ಸಾಮಾಜಿಕ ಮಾನವಕುಲಶಾಸ್ತ್ರ, ಮನಃಶಾಸ್ತ್ರೀಯ ಮಾನವಕುಲಶಾಸ್ತ್ರಗಳು ಈ ನೆಲೆಯಲ್ಲಿ ಸಾಕಷ್ಟು ಸಂಶೋಧನೆ ಮಾಡಿವೆ. ಲೆವಿಸ್ಟ್ರಾಸ್‌ನ 'ಸಂರಚನಾ ಸಿದ್ಧಾಂತ'ದ ಫಲಿತಗಳು ಇಂಥ ಚಿಂತನೆಯನ್ನು ಬುಡಮೇಲು ಮಾಡಿದ್ದವು ಕೂಡ. ಹೀಗಾದಾಗಲೂ ಭಾಷಿಕವಾಗಿ ನಂಬಿಕೆಗಳು ರೂಪಿಸುವ ಜಗತ್ತನ್ನು ಆತ ನಿರ್ಲಕ್ಷಿಸಲಾಗಲಿಲ್ಲವೆಂಬುದು ಬೇರೆ ಮಾತು. ಮತ್ತೆ ಪ್ರಾಯ್ಡ್‌ನ ಆಲೋಚನೆಗೆ ಬರುವುದಾದರೆ, ಟೊಟೆಂ ಮತ್ತು ಟ್ಯಾಬೂಗಳು ಒಂದು ಜನಸಮುದಾಯದ ನಂಬಿಕೆಯ ಮನೋಲೋಕವೇ ಆಗಿರುತ್ತವೆ. ಸಾಮಾಜಿಕ, ಆರ್ಥಿಕ ಅನುನಯಗಳೇನಿದ್ದರೂ, ನಂಬಿಕೆಯ ನಿರಾಕರಣೆಯು ನಿಷೇಧದಲ್ಲಿ ಅಂತ್ಯವಾಗುವಾಗ ಅದರ ಮೂಲಧಾತು ನಂಬಿಕೆಯ ಬಗೆಗಿನ ಭಯವೇ. ಅಂಗೀಕಾರನೆಲೆಯ ಟೊಟೆಂ ಕೂಡ ಕುಲವೊಂದರ ಒಳಗೊಳ್ಳುವಿಕೆಯ ಸಾಮಾಜಿಕ ಪವಿತ್ರ ನಂಬಿಕೆಯೇ ಆಗಿರುತ್ತದೆ. ನಿರ್ದಿಷ್ಟ ಸಮುದಾಯಕ್ಕೆ ಒಂದು ಪ್ರಾಣಿ, ಸಸ್ಯವು ಚೈತನ್ಯದಾಯಕ ಟೊಟೆಂ ಆದಾಗ ಅದು ಸಾಮಾಜಿಕ ಕುಲ ಪವಿತ್ರತೆಯ ಲೋಕವನ್ನು ಪ್ರತಿನಿಧಿಸುತ್ತದೆ. ಇದು ಆ ಸಮುದಾಯದ ನಂಬಿಕೆ. ಹಾಗೆಯೇ ಯಾವುದು ಟೊಟೆಂ ಆಗಿರುತ್ತದೆಯೋ ಅದೇ ಆ ಕುಲಕ್ಕೆ ಟ್ಯಾಬೂ ಆಗಿರುತ್ತದೆ.

ಸಿಗ್ಮಂಡ್ ಫ್ರಾಯ್ಡ್ ಇದನ್ನು ಲೈಂಗಿಕ ಸಂಬಂಧಗಳಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ನಂಬಿಕೆಗಳ ನೆಲೆಯಲ್ಲಿ ಕಾಣಿಸುತ್ತಾನೆ. ಆ ನಂಬಿಕೆಗಳು ಸಮುದಾಯ ಬದುಕು ರೂಪಿಸಿಕೊಂಡಿರುವ ಪ್ರಾದೇಶಿಕತೆ, ಆಹಾರ ವ್ಯವಸ್ಥೆ, ಸಾಮಾಜಿಕ ವೈಚಿತ್ರ್ಯ, ಚಾರಿತ್ರಿಕ ಕಾಲಘಟ್ಟ, ಆರ್ಥಿಕ ಪರಿಸ್ಥಿತಿ, ಉತ್ಪಾದನೆ ಮತ್ತು ಸರಕು ಹಂಚಿಕೆ, ರಾಜಕೀಯ ವಿದ್ಯಾಮಾನಗಳ ತುರ್ತು ಕೊಡುಗೆಗಳಾಗಿರುತ್ತವೆ ಎಂದು ನಂತರದ ಅನೇಕರು ಶೋಧಿಸಿದರು. ಯಾಕೆಂದರೆ, ಸಮುದಾಯವೊಂದರ ಲೋಕದೃಷ್ಟಿ ಆ ಸಮುದಾಯ ನಂಬಿಕೊಂಡಿರುವ ದ್ವಂದ್ವಾತ್ಮಕ ನಂಬಿಕೆಗಳ ಅಂಗೀಕಾರ ಮತ್ತು ನಿರಾಕರಣೆಯ ಸಾದೃಷ್ಯದಾಚೆಯ ಅಮೂರ್ತ ರೂಪವಾಗಿರುತ್ತದೆ. ಅರ್ನಷ್ಟ್ ಬ್ರೂಕ್ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳ ನಿಯಮಗಳನ್ನು ಉಪಯೋಗಿಸಿಕೊಂಡು ಮನುಷ್ಯ ಮತ್ತು ಪ್ರಾಣಿಪಕ್ಷಿಗಳ ವರ್ತನೆ ಮತ್ತು ನಂಬಿಕೆಗಳನ್ನು ಅಧ್ಯಯನ ಮಾಡಬಹುದು ಎಂದು ಜಗತ್ತಿಗೆ ತಿಳಿಸಿದ. ಬ್ರೂಕನ ಮಾರ್ಗದರ್ಶನದಲ್ಲಿ ಫ್ರಾಯ್ಡ್ ಆರುವರ್ಷಗಳ ಕಾಲ ಮೆದುಳಿನ ಬಗ್ಗೆ ಸಂಶೋಧನೆ ಮಾಡಿ ಮಾನವರ ಮತ್ತು ಪ್ರಾಣಿಪಕ್ಷಿಗಳ ಮೆದುಳಿನ ಹೋಲಿಕೆ ಮತ್ತು ವ್ಯತ್ಯಾಸವನ್ನು ಕಂಡುಕೊಂಡ. ಮನೋವಿಶ್ಲೇಷಣೆ ಹೇಳುವಂತೆ; ಆದಿನ ಕೂಡುಕಟ್ಟಿನ ನಂಬಿಕೆಗಳಿಗೆ

[4] ಅದೇ. ಪುಟ.25

[5] ಅದೇ. ಪುಟ.31

ಶತಮಾನಗಳ ಸೆಳೆತವಿರುತ್ತದೆ. ಇದು ನರರೋಗಕ್ಕೂ ಸಂಬಂಧಿಸಿದ್ದೆಂದು ಫ್ರಾಯ್ಡ್ ನಿರೂಪಿಸಿದ. ನಂಬಿಕೆಯ ವೈಚಿತ್ರ್ಯಗಳನ್ನು ವೈಜ್ಞಾನಿಕಕ್ರಮದಲ್ಲಿ ಸಾಧಿಸಲು ಆತ ಸಾಕಷ್ಟು ಶ್ರಮಿಸಿದ್ದಾನೆ.

ತಮ್ಮ ಕೃತಿಯಲ್ಲಿ ಬೇವಿನಕಟ್ಟೆಯವರು ನಂಬಿಕೆಗಳೊಂದಿಗೆ ಮಾನವಕುಲ ವಿಕಾಸ ಹೇಗೆಲ್ಲಾ ಸಾಂಸ್ಕೃತಿಕ ಬಹುತ್ವವನ್ನು ಸಾಧಿಸುತ್ತಾ ಬಂದಿದೆಯೆಂಬುದನ್ನು ನಿರೂಪಿಸುತ್ತಾರೆ. ಮಾನವ ಆದಿಮಸ್ಥಿತಿಯಲ್ಲಿ ನಂಬಿಕೊಂಡಿದ್ದ ಫಲವಂತಿಕೆಯೊಂದಿಗೆ ನೇರ ಸಂಬಂಧವನ್ನು ಹೊಂದಿದ್ದ ಬಲಿ ಪದ್ಧತಿಯ ಬಗ್ಗೆ ಸಂಕ್ಷಿಪ್ತವಾಗಿ ಬರೆಯುತ್ತಾರೆ. ಬಲಿ ರೂಪಿಸಿದ ಮನೋ ನಂಬಿಕೆಯ ಲೋಕ ಮತ್ತು ನಂಬಿಕೆ ರೂಪಿಸಿದ ಬಲಿ ಪ್ರಕ್ರಿಯಾತ್ಮಕ ಸಾಂಸ್ಕೃತಿಕ ವ್ಯವಸ್ಥೆಯೊಂದಿಗೆ ಮಾನವನು ವಿಕಾಸವಾದ ಬಗೆಯು ತೀರಾ ಸಂಕೀರ್ಣವಾದುದು. ಥಾಮ್ಸನ್, ಪ್ರೇಝರ್ ಮತ್ತು ಬ್ರಿಫಾಲ್ಟ್‌ನ ಬರೆಹಗಳಲ್ಲಿ ಬಲಿಯ ಹೇರಳವಾದ ವಿವರಗಳಿವೆ. ಬಲಿಯನ್ನು ಕುರಿತು ಬೇವಿನಕಟ್ಟೆಯವರು ನಂಬಿಕೆಗಳ ತಾತ್ವಿಕತೆ ಮತ್ತು ಫಲವಂತಿಕೆಯ ಅಗತ್ಯ ಸಾಮಾಜಿಕನೆಲೆಯಿಂದ ವಿವರಿಸಿಕೊಳ್ಳುತ್ತಾರೆ. ವರ್ತಮಾನ ಇಂದಿನ ಸಾಮಾಜಿಕ ಬದುಕಿನ ಪದ್ಧತಿಯಲ್ಲಿ ಬಲಿ ಹಿಂಸಾತ್ಮಕ ರೂಪದಲ್ಲಿ ವ್ಯಾಖ್ಯಾನಿಸಲ್ಪಡುತ್ತಿರಬಹುದು. ಆದರೆ ಚಾರಿತ್ರಿಕ ಕಾಲಘಟ್ಟವೊಂದರಲ್ಲಿ ಮಾನವ ಬದುಕನ್ನೂ ನಂಬಿಕೆಯ ತತ್ವವಾಗಿ ಆವರಿಸಿತ್ತು ಎಂಬುದನ್ನು ಅನೇಕ ಸಂದರ್ಭ, ಸಂಗತಿ, ಘಟನೆಗಳೊಂದಿಗೆ ವಿವರಿಸಿದ್ದಾರೆ. ಮುಂದುವರಿದಂತೆ ಬೇರೆ ಬೇರೆ ದೇಶಗಳ, ಬೇರೆ ಬೇರೆ ಪ್ರಾಂತ್ಯಗಳ ನಿದರ್ಶನಗಳನ್ನು ನೀಡುತ್ತಾರೆ. ಆ ಮೂಲಕ ನಂಬಿಕೆಗಳ ತೌಲನಿಕ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಮನಃಶಾಸ್ತ್ರದ ನೆಲೆಯಲ್ಲಿ ಚರ್ಚಿಸುತ್ತಾರೆ. ಇದು ಈ ಕೃತಿಯ ಧನಾತ್ಮಕ ಗುಣಾಂಶ.

ಬೇವಿನಕಟ್ಟೆಯವರ ಕೃತಿಯು ನಂಬಿಕೆಯ ಬಹುವ್ಯಾಪಕತೆಯನ್ನು ಸಮಗ್ರವಾಗಿ ಹಿಡಿಯಲು ಯತ್ನಿಸುತ್ತದೆ ಎಂದು ಈ ಹಿಂದೆ ಹೇಳಲಾಯ್ತು. 'ಯತ್ನಿಸುವ' ಕ್ರಿಯೆಯ ಆರಂಭವು 'ಸಾರ್ಥಕ'ವಾಗಿಸಲಾಯಿತು ಎಂಬುದರ ಅಂತಿಮ ಫಲವಲ್ಲ. ಕಾರಣ, ಆಯ್ಕೆಮಾಡಿಕೊಂಡ ವಸ್ತುವಿಷಯಕ್ಕೆ ಸಂಬಂಧಿಸಿದ ವೈಧಾನಿಕತೆಯು ಬಹುಮುಖ್ಯವಾಗುತ್ತದೆ. ಜನಪದ ಸಂಸ್ಕೃತಿಯನ್ನು ಕುರಿತಾದ ಆರಂಭಿಕ ಅಧ್ಯಯನಗಳು ವೈಧಾನಿಕತೆಯ ರಾಜಕಾರಣದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿದ್ದಿಲ್ಲ. ಇಂಥ ಹೊತ್ತಲ್ಲಿಯೇ ರಷ್ಯಾ ಮತ್ತು ಅಮೇರಿಕಾಗಳ ಜ್ಞಾನ ವಸಾಹತುಗಳು ಮೇಲಾಟದಲ್ಲಿ ತೊಡಗಿ ಸ್ಕಾಲರ್‌ಗಳಿಗೆ ಅಚ್ಚರಿಯೆನಿಸುವಷ್ಟು ದೇಣಿಗೆ ನೀಡಿ ಅಧ್ಯಯನಕ್ಕೆ ತೊಡಗಿಸಿದರು. ಆರಂಭದಲ್ಲಿ ಸಾಂಸ್ಕೃತಿಕ ಸಮಾಜಶಾಸ್ತ್ರೀಯ ವೈಧಾನಿಕತೆಯ ಮೂಲಕ ಸಮುದಾಯಗಳನ್ನು ಅಧ್ಯಯನ ಮಾಡುವ ಹಿಂದೆಯೂ ವಸಾಹತು ರಾಜಕಾರಣಕ್ಕೆ ತನ್ನದೇ ಆದ ರಾಜಕೀಯ ಮುನ್ನೋಟಗಳಿದ್ದವು. ನಂತರ ಸಮಾಜಶಾಸ್ತ್ರೀಯ ಮಾನವಕುಲಶಾಸ್ತ್ರವನ್ನು ಅಧ್ಯಯನ ವಿಧಾನವಾಗಿ ರೂಪಿಸುವಾಗಲೂ ತೃತೀಯ ರಾಷ್ಟ್ರಗಳ ಸಬಾಲ್ಟರ್ನ್‌ಗಳನ್ನು ನಿಸ್ತೇಜವಾಗಿಸುವ ಕ್ರಮಗಳೂ ಸಾಧ್ಯವಾಗಿದ್ದವು. ಸಮುದಾಯವೊಂದರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜಕಾರಣ, ಧಾರ್ಮಿಕ ನಂಬಿಕೆಗಳನ್ನು ಮಾನವಕುಲಶಾಸ್ತ್ರೀಯ ನೆಲೆಯಲ್ಲಿ ಅರ್ಥಮಾಡಿಕೊಂಡು ದಾಖಲಿಸುವುದು ಜಾಗತಿಕವಾಗಿ ಪ್ರಬಲ ರಾಷ್ಟ್ರವೊಂದಕ್ಕೆ 'ನವವಸಾಹತು ವಿಧಾನ' ರೂಪಿಸಲು ಸಹಾಯಕವಾಗುತ್ತದೆ. ಕಳೆದ ಶತಮಾನದ ಆರಂಭದಲ್ಲಿ ಆರಂಭಗೊಂಡ ಲೆವಿಸ್ಟ್ರಾಸ್‌ನ ಸಂರಚನಾವಾದಿ ಮಾನವಕುಲಶಾಸ್ತ್ರವು ಅಮೇರಿಕಾದ ವಸಾಹತು ನೆಲೆಗೆ ಸಹಾಯಕವಾಗಿ ನಿಂತದ್ದೂ ಈ ನೆಲೆಯಲ್ಲಿಯೇ. ಎಂ.ಎನ್. ಶ್ರೀನಿವಾಸರ A Remembered Village ಕೂಡ ಈ ನೆಲೆಯದ್ದೇ. ಇಂಥ ಕಾಲಘಟ್ಟದಲ್ಲಿ ಬೇವಿನಕಟ್ಟೆಯವರ ಕೃತಿ ದೇಸಿ ಮತ್ತು ಪಾಶ್ಚಾತ್ಯ ಮಾದರಿಗಳೆರಡನ್ನೂ ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುತ್ತದೆ. ದೇಸಿ ಸಾಂಸ್ಕೃತಿಕ ವೈಧಾನಿಕತೆಗೆ ಒಲವು ತೋರುತ್ತದೆ.

ವಸಾಹತುಜ್ಞಾನದ ಅಧಿಕೃತತೆಯ ಪ್ರಮಾಣಗಳ ಅತ್ಯಂತಿಕ ಉದ್ದೇಶ ಸಮುದಾಯಗಳ ಲೋಕದೃಷ್ಟಿಯ ನಂಬಿಕೆಗಳನ್ನು ಭ್ರಷ್ಟಗೊಳಿಸುವುದು. ಇದು ಸಾಧ್ಯವಾಗುವುದು ಶೈಕ್ಷಣಿಕ ಪ್ರಯೋಗಿಕತೆಯ ಮೂಲಕ ಮಾತ್ರ. ಆದಿವಾಸಿ ಸಮುದಾಯಗಳ ಜ್ಞಾನಶಾಖೆಯು ಸಂಪ್ರದಾಯವಾದಿ, ಅವೈಜ್ಞಾನಿಕ ಎಂದು ನಿರೂಪಿಸಿದರೆ ಆಧುನಿಕ ಜ್ಞಾನಶಾಖೆಯ ವಸಾಹತು ಸುಲಭ ಸಾಧ್ಯ. ಈ ಕಾರಣಕ್ಕೆ ಆದಿವಾಸಿಗಳಿಗೆ ಆಧುನಿಕ ಶಿಕ್ಷಣದ ಆಯ್ಕೆ ಮತ್ತು ನಿರಾಕರಣೆಗಳು ಕೇವಲ ಅಸ್ತಿತ್ವದ ಪ್ರಶ್ನೆಗಳಾಗದೆ ಹೋಗುತ್ತವೆ. ಆದಿವಾಸಿಗಳನ್ನು ಮುಖ್ಯವಾಹಿನಿಗೆ ತರಬೇಕೆಂಬ ಮಹತ್ವದ ಉದ್ದೇಶದ ಹಿಂದೆ ಅಪ್ರಜ್ಞಾಪೂರ್ವಕವಾಗಿ ಅದರ ನಂಬಿಕೆಯ ಲೋಕವನ್ನು ನಾಶಮಾಡಲಾಗುತ್ತದೆ. ವಾಸ್ತವವಾಗಿ ಇದು ಉದ್ದೇಶಪೂರ್ವಕವಾಗಿ ರೂಪಿಸಿದ ವಿಧಾನ ಆಗಿರುತ್ತದೆ. ಇದರ ಅತ್ಯಂತಿಕ ಸಾರ್ವತ್ರಿಕ ಆಲೋಚನೆ ಕಲಾವಿಭಾಗದ ಜ್ಞಾನಶಾಖೆಯು ಪ್ರಮಾಣವಲ್ಲ. ಸಮಾಜಶಾಸ್ತ್ರ, ಮಾನವಕುಲಶಾಸ್ತ್ರದ ಉತ್ಪಾದಿತ ಸತ್ಯವು ಸತ್ಯವಲ್ಲ ಎನ್ನುವಲ್ಲಿಗೆ ಬಂದು ನಿಲ್ಲುತ್ತದೆ. ವೈಜ್ಞಾನಿಕ ಎನ್ನುವ ಮೂಲಕ ಇನ್ನುಳಿದ ಫಲಿತ ಜ್ಞಾನವನ್ನು ತಿರಸ್ಕಾರ ಮಾಡಲಾಗುತ್ತದೆ. ಶೈಕ್ಷಣಿಕ ರಾಜಕಾರಣದ ವೈಧಾನಿಕತೆಯನ್ನು ಕುರಿತಾಗಿ ಥಾಮ್ಸನ್ ಅತ್ಯಂತ ಸೂಕ್ಷ್ಮವಾಗಿ ಬರೆಯುತ್ತಾನೆ. ಈ ಅಪಾಯವನ್ನು ಸೂಕ್ಷ್ಮವಾಗಿ ಗುರುತಿಸುವ ಬೇವಿನಕಟ್ಟೆಯವರು "ಮಾನವ ಜೀವನದಲ್ಲಿ ಸಮಾಜ ವಿಜ್ಞಾನ ಮತ್ತು ಭೌತಿಕ ವಿಜ್ಞಾನಗಳು ಜೊತೆ, ಜೊತೆಗೇ ಹೋಗಬೇಕು. ಅಂದಮಾತ್ರಕ್ಕೆ ಸಮಾಜ ವಿಜ್ಞಾನಗಳು ಸುಳ್ಳು ಹೇಳುತ್ತವೆ ಎಂದು ತಿಳಿಯಬಾರದು, ಸಾಮಾಜಿಕ ಅಗತ್ಯತೆ ವೈಧಾನಿಕತೆಯನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತದೆ. ಆಗ ಭೌತವಿಜ್ಞಾನ ಮತ್ತು ಸಮಾಜವಿಜ್ಞಾನಗಳು ಜೊತೆಜೊತೆಗೇ ಹೋಗಬೇಕಾಗುತ್ತದೆ"[6]ಎಂದು ಆಶಿಸುತ್ತಾರೆ. ಬೇವಿನಕಟ್ಟೆಯವರು ಮುಂದುವರಿದು ನಂಬಿಕೆಗಳ ಸಾರ್ವತ್ರಿಕ ಮತ್ತು ಶಾಶ್ವತ ತತ್ವಗಳನ್ನು ಕುರಿತು ವಿಶ್ಲೇಷಿಸುತ್ತಾರೆ. ಯಾವ ಯಾವ ವಿಧಾನಗಳು ಸಾಮಾಜಿಕ ಘಟಕಗಳು ನಂಬಿಕೆಗಳನ್ನು ಹೇಗೆ ಕಾಣಿಸುತ್ತವೆ, ವಿಶ್ಲೇಷಿಸಲು ಯತ್ನಿಸುತ್ತವೆ, ಒಪ್ಪುತ್ತವೆ, ನಿರಾಕರಿಸುತ್ತವೆ ಎಂಬುದನ್ನು ದಾಖಲಿಸುತ್ತಾರೆ.

**ನಿಷೇಧಗಳ ನಂಬಿಕೆಗಳು**

ಮೇಲೆ ವಿವರಿಸಲಾದ ಫ್ರಾಯ್ಡ್‌ನ ಆಲೋಚನೆಯನ್ನು ಈ ಭಾಗದಲ್ಲಿ ಸೇರಿಸಿಕೊಂಡು ಓದಬಹುದು. ಮಾನವ ಬದುಕಿನಲ್ಲಿ ನಂಬಿಕೆಗಳು ಯಾವತ್ತೂ ಆಯ್ಕೆಯ ದ್ವಂದ್ವನೆಲೆಯಿಂದ ಬಂದವುಗಳಾಗಿದ್ದರೂ, ಸಾಮುದಾಯಿಕ ಉಳಿಕೆ ಮತ್ತು ಸದ್ಯದ ಕಾರಣಗಳನ್ನು ಮೀರಿದವುಗಳು. ಒಂದರ್ಥದಲ್ಲಿ ನೈಸರ್ಗಿಕನ್ಯಾಯದ ಮೂಲದಿಂದಲೇ ಸಾಮಾಜಿಕನ್ಯಾಯದ ಆದಿಮ ಉಗಮಕ್ಕೆ ಕಾರಣವಾದವುಗಳು. ಆಹಾರ ಆಯ್ಕೆ ಮತ್ತು ವಾಸದ ಆಯ್ಕೆಯೊಂದಿಗೆ ಲೈಂಗಿಕ ಆಯ್ಕೆಗಳು ಈ ನೆಲೆಯವು ಎನ್ನಲು ಅಡ್ಡಿಗಳಿಲ್ಲ. ನಂಬಿಕೆ ಲೋಕದ ಮೂಲತತ್ವಗಳು ಒಪ್ಪಿಗೆ ಮತ್ತು ನಿರಾಕರಣೆ; ಅದರಾಚೆಯ ರಾಜಕೀಯ ಅಸ್ತ್ರವಾಗಿ ನಿಷೇಧ ಪ್ರಯೋಗವಾಗುತ್ತದೆ. ಬೇವಿನಕಟ್ಟೆಯವರು ತಮ್ಮ ಕೃತಿಯಲ್ಲಿ ನಂಬಿಕೆ ಮತ್ತು ನಿಷೇಧಗಳಿಗಿರುವ ಅಂತರ್ಗಾಮಿ ಸಾಮಾಜಿಕ ಸಂಬಂಧವನ್ನು ಅರಿಯಲು ಯತ್ನಿಸುತ್ತಾರೆ. "ನಂಬಿಕೆ ಮತ್ತು

[6] ಅದೇ. ಪುಟ.124

ನಿಷೇಧಗಳು ಪರಸ್ಪರ ಸಂಬಂಧಿಗಳಾಗಿವೆ. ನಿಷೇಧ ಮತ್ತು ನಂಬಿಕೆಗಳ ಅಸ್ತಿತ್ವದಲ್ಲಿ ಬಹಳಷ್ಟು ವ್ಯತ್ಯಾಸವನ್ನು ಗುರುತಿಸುವುದು ಕಷ್ಟಸಾಧ್ಯ. ಭಯದ ಹಿನ್ನೆಲೆಯಲ್ಲಿ ಯಶಸ್ಸಿನ ನಿರೀಕ್ಷೆಯಲ್ಲಿ ನಿಷೇಧಗಳು ರೂಪಿತವಾದರೆ, ಭಾವನಾತ್ಮಕತೆ ಮತ್ತು ಚತುರತೆಯ ಹಿನ್ನೆಲೆಯಲ್ಲಿ ನಂಬಿಕೆ ರೂಪಿತವಾಗಿದೆ. ಸಂಸ್ಕೃತಿ ಜನಾಂಗಕ್ಕೆ ಪೂರಕವಾದ ಈ ಅಂಶಗಳು ಕ್ರಿಯಾಗ್ರಾಹ್ಯವೂ ಹೌದು. ಬುದ್ಧಿಗ್ರಾಹ್ಯವೂ ಹೌದು. ಸಾಮಾಜಿಕರ ದೈನಂದಿನ ಬದುಕಿನಲ್ಲಿ ಉಪಾಸನೆ ಮತ್ತು ಕ್ರಿಯಾವಿನ್ಯಾಸಗಳು ನಿಷೇಧದ ಮುಖೇನ ರೂಢಿಯಲ್ಲಿರುತ್ತವೆ. ನಿಷೇಧಕ್ಕೆ ಮೂಲವಾಗಿರುವ ಅಂಶವೇ ನಂಬಿಕೆಯಾಗಿರುತ್ತದೆ"[7] ಎನ್ನುತ್ತಾರೆ. ಬೇವಿನಕಟ್ಟೆಯವರು ಈ ನಿಟ್ಟಿನಲ್ಲಿ ಸ್ಪಷ್ಟವಾದ ನಿಲುವಿನಲ್ಲಿದ್ದಾರೆ. ನಂಬಿಕೆ ಮತ್ತು ನಿಷೇಧಕ್ಕೆ ಸಂಬಂಧಿಸಿದಂತೆ ಅವರ ಮಹತ್ವದ ಫಲಿತವೆಂದರೆ, ಯಾವುದೇ ಸಮುದಾಯದಲ್ಲಿ ನಿಷೇಧದ ಅಸ್ತಿತ್ವವು ನಂಬಿಕೆಯ ಪರಿವೇಷದಲ್ಲಿರುತ್ತದೆ. ನಂಬಿಕೆಯು ಆಚರಣೆಯ ಹಂತದಲ್ಲಿದ್ದರೆ ಮಾತ್ರ ನಿಷೇಧವೆನಿಸಿದರೆ, ನಿಷೇಧವು ಭಾವಕ್ಕಷ್ಟೇ ಸೀಮಿತವಾದರೆ ನಂಬಿಕೆಯಾಗುತ್ತದೆ. ಅಷ್ಟೇ ಅಲ್ಲದೆ ಇವೆರಡೂ ಯಾವತ್ತೂ ಸಮುದಾಯಗಳ ಐಚ್ಚಿಕ ಆಯ್ಕೆಗೆ ಸಂಬಂಧಿಸಿದವು ಎಂಬುದು.

ನಿಷೇಧಗಳ ವರ್ಗವಿಂಗಡನೆಯನ್ನು ಫ್ರೇಜರ್ ವೈಜ್ಞಾನಿಕವಾಗಿ ವಿಭಾಗಿಸಿಕೊಳ್ಳುತ್ತಾನೆ. ನಿಷೇಧಗಳ ಕುರಿತಾಗಿ ಮೊದಲು ಉಲ್ಲೇಖಿಸಿದವನು ಮೆಕ್ಲನನ್. ಆಂಡ್ರೂಲಾಂಗ್ ಈ ಕುರಿತಾಗಿ ಯಾರೂ ಸರಿಗಟ್ಟಲಾಗದ ಕೆಲಸ ಮಾಡಿದ್ದಾನೆ. ನಿಷೇಧಗಳ ಕ್ರಮವಾಗಿ ಜೋಡಿಸಿ ಅವುಗಳ ವಿಶ್ವವ್ಯಾಪಕತ್ವದ ಬಗ್ಗೆ ವಿವರಣೆ ನೀಡಿದವನು ಫ್ರೇಜರ್. ಆದರೆ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿದವನು ಎ.ಎ. ಗೋಲ್ಡನ್‌ವೈಸರ್. ಟೇಲರ್, ಡರ್ಖಿಮ್, ಸಿಗ್ಮಂಡ್ ಫ್ರಾಯ್ಡ್, ಲೆವಿಸ್ಟ್ರಾಸ್, ಕೊಸಾಂಬಿ, ದೇವಿಪ್ರಸಾದ್ ಚಟ್ಟೋಪಧ್ಯಾಯ, ಬಾಬಾಸಾಹೇಬ್ ಅಂಬೇಡ್ಕರ್ ಮೊದಲಾದವರು ನಂಬಿಕೆಯೇ ಹೇಗೆ ನಿಷೇಧವಾಗುತ್ತಾ ಸಾಗಿತು ಎಂಬುದರ ಬಗ್ಗೆ ವಿಸ್ತೃತವಾಗಿ ಚರ್ಚಿಸಿದ್ದಾರೆ. ಆದರೆ ನಿಷೇಧಗಳೇ ಹೇಗೆ ಜಾತಿವ್ಯವಸ್ಥೆಯಾಗಿ ರೂಪಗೊಳ್ಳಲು ಸಾಧ್ಯವಾಯಿತು ಎಂಬುದನ್ನು ಬಾಬಾಸಾಹೇಬರು ಚರ್ಚಿಸುತ್ತಾರೆ. ಈ ಚರ್ಚೆಗಳು ಬೇವಿನಕಟ್ಟೆಯವರ ಕೃತಿಯಲ್ಲಿ ಕಂಡುಬಂದಿದ್ದರೆ ಈ ಕೃತಿ ಮತ್ತಷ್ಟು ಗಂಭೀರವಾಗಿರುತ್ತಿತ್ತು.

ಬೇವಿನಕಟ್ಟೆಯವರು ನಿಷೇಧಗಳ ಕುರಿತಾಗಿ ದಾಖಲಿಸಿರುವ ಮತ್ತೊಂದು ಮಹತ್ವದ ಅಂಶವೆಂದರೆ, ನಿಷೇಧಗಳ ವಿಂಗಡನೆಯಲ್ಲಿ ನಿಷೇಧಗಳಿಗಿರುವ ಬಹುರೂಪಕತ್ವ ಮತ್ತು ನಂಬಕೆಯೊಂದಿಗಿನ ಅಪ್ರತ್ಯೇಕತೆಯ ನೆಲೆಯದ್ದು; ಮತ್ತು ಸಾಮಾಜಿಕವಾಗಿ ಅದು ಪಡೆಯುವ ಅಮೂರ್ತತೆಯೊಂದಿಗಿನ ಪರಿವರ್ತಿತ ವರ್ತಮಾನದ ಹೊಂದಿಕೆ. ಈ ಹೊಂದಿಕೆ ಮತ್ತು ಪರಿವರ್ತನೆ ಆಯಾಕಾಲದ ಸಾಂಸ್ಕೃತಿಕ ಲೋಕದೃಷ್ಟಿಯನ್ನು ಹೇಗೆ ಮರುರೂಪಿಸಬಲ್ಲದು ಎಂಬುವ ಪ್ರಶ್ನೆಯು ಈ ಕೃತಿಯಲ್ಲಿ ಮೂಡಿಬಂದಿದ್ದರೆ ಮತ್ತಷ್ಟು ಸಶಕ್ತವಾಗುತ್ತಿತ್ತು. ಬೇವಿನಕಟ್ಟೆಯವರ ವೈಧಾನಿಕತೆಯಲ್ಲಿ ಈ ಪ್ರಶ್ನೆಗೆ ಅವಕಾಶವಿತ್ತು ಎಂಬ ಕಾರಣಕ್ಕೆ ಈ ಮಾತು ಪ್ರಸ್ತುತ. "ನಿಷೇಧದಲ್ಲಿಯ ನಂಬಿಕೆ ತುಂಬಾ ಬಲವಾದುದು. ನಿಷೇಧ ಒಂದು ನಿರ್ದಿಷ್ಟಪಡಿಸಿದ ಸಾಮಾಜಿಕ ಆವರಣವಾಗಿದೆ. ಬೇರೆ ಕಡೆಯಲ್ಲಿ ನಂಬಿಕೆ ಅತ್ತಿತ್ತ ಚಲಿಸಬಹುದಾದರೂ ನಿಷೇಧದಲ್ಲಿಯ ನಂಬಿಕೆ ಅಚಲವಾಗಿ ನಿಲ್ಲಬೇಕು. ನಿಷೇಧದಲ್ಲಿಯ ನಂಬಿಕೆಯಿರುವುದು ಎರಡೇ ಅವಕಾಶಗಳು ಒಂದು ನಿಷೇಧದೊಳಗೆ ಭದ್ರವಾಗಿದ್ದು ಅದನ್ನು ರಕ್ಷಿಸುವುದು; ಇಲ್ಲವೇ ತನ್ನ ಸೋಲನ್ನು ಒಪ್ಪಿಕೊಂಡು ಕಳೆದುಹೋಗುವುದು"[8]. ಅವರು ನಂಬುವಂತೆ ಸಾಮಾಜಿಕ ಪರಿವರ್ತನೆಯ ಕಾಲ ಇದನ್ನು ನಿರ್ಧರಿಸುತ್ತದೆ. ಈ ನಿಷೇಧಗಳು ಶಾಶ್ವತವಾಗಿರಲೇಬೇಕೆಂಬ ಅಂತ ನಿಯಮಗಳೇ ಕಠಿಣವಾದಷ್ಟೂ, ಅದರ ಸಂರಕ್ಷಣಾತ್ಮಕ ನೆಲೆಯಿಂದ ಹೊರದೂಡುವ ಕ್ರಿಯೆಗೂ ಕಾರಣವಾಗುತ್ತದೆ. ಈ ನಿರ್ಬಂಧ ಬಹುತೇಕ ಮುಕ್ತ ಉತ್ಪಾದನೆಗೆ ಅವಕಾಶ ನೀಡದೇ ಇದ್ದಾಗ ಸಾಮಾಜಿಕ ಅಗತ್ಯವಾದ ಮತ್ತು ಫಲವಂತಿಕೆಯ ಕ್ರಿಯೆಯಾದ ಲೈಂಗಿಕತೆಗೂ ಸಂಕೀರ್ಣ ಸ್ಥಿತಿ ಏರ್ಪಡುತ್ತದೆ. ಸಮುದಾಯದೊಳಗೆ ಲಿಂಗ ಸರಾಸರಿ ಏರುಪೇರಾದಾಗ ಸಂರಕ್ಷಣಾತ್ಮಕ ನಿಷೇಧವೂ ಸಂರಕ್ಷಣಾತ್ಮಕತೆಗೆ ವಿರೋಧದ ನೆಲೆಯಲ್ಲಿ ಕೆಲಸ ಮಾಡುತ್ತದೆ. ಆಗ ವ್ಯಕ್ತಿ ಸೋಲನ್ನು ಒಪ್ಪಿಕೊಂಡು ನಿಷೇಧವನ್ನು ದಾಟಬೇಕಾಗುತ್ತದೆ. ಇದರಿಂದಾಗುವ ಸಾಮಾಜಿಕ ಬೆಳವಣಿಗೆಗಳನ್ನೂ ಚರ್ಚಿಸಲು ಈ ಕೃತಿ ಅವಕಾಶಗಳನ್ನು ಒದಗಿಸುತ್ತದೆ.

**ವಲಸೆಯ ನಂಬಿಕೆಗಳು**

ಬೇವಿನಕಟ್ಟೆಯವರ ಕೃತಿ ದಾಖಲಿಸುವ ವಲಸೆಯ ಪ್ರಕ್ರಿಯೆಯು ಆದಿಮ ಮಾನವ ನಂಬಿಕೆಯ ಲೋಕದೃಷ್ಟಿಯನ್ನು ರೂಪಿಸಿದ ಸಾಮಾಜಿಕ ವ್ಯವಸ್ಥೆ ಮುಖ್ಯವಾದುದು. ಆದಿವಾಸಿ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯ ಅರ್ಥೈಸುವಿಕೆಯಲ್ಲಿ ಅವರ ವ್ಯಾಖ್ಯಾನದ ದೃಷ್ಟಿಕೋನ ಸಾಂಪ್ರದಾಯಿಕತೆಯ ತೆಳುಗುಣದಿಂದ ಕೂಡಿದೆಯಾದರೂ, ಮಾಹಿತಿಯ ಮೂಲದಿಂದ ಸಮೃದ್ಧವಾಗಿದೆ. ನಂಬಿಕೆಯ ಅಧಿಕೃತತೆ ಮತ್ತು ನೆಚ್ಚಿಕೆಯ ಪ್ರಶ್ನೆಯ ದೃಷ್ಟಿಯಿಂದ ವಲಸೆ ಪ್ರಕ್ರಿಯೆಯ ರೂಪಿಸುವ ಮತ್ತು ವಲಸೆಯ ಪ್ರಕ್ರಿಯೆಯಿಂದಾಗುವ ನಂಬಿಕೆಗಳ ಮಾರ್ಪಾಡು ಎಂಥದು? ಎಂಬುದು ಪ್ರಮುಖ. ವಲಸೆಯಿಂದಾಗಿ ನಂಬಿಕೆಗಳ ಪ್ರಸಾರಣ ಸಾಧ್ಯವಾಗುವಂತೆಯೇ ನಂಬಿಕೆಯ ಹುಟ್ಟು ಮತ್ತು ಪ್ರಾದೇಶಿಕತೆಯ ಮೂಲೋದ್ದೇಶ ಪ್ರಶ್ನಾರ್ಹವಾಗುತ್ತದೆ. ಪ್ರಸ್ತುತ ಭಾರತೀಯ ನಾಗರಿಕತೆಯು, ಗತದಲ್ಲಿ ಜರುಗಿ ಹೋದ ವಿಭಿನ್ನವಾದ ವಲಸೆಗಳಿಂದಾಗಿ ಚರಿತ್ರೆ, ಉದ್ಧೃತಿ, ಸಂಸ್ಕೃತಿ, ಸಂಪ್ರದಾಯಗಳು ರೂಢನಂಬಿಕೆಗಳು ಅನೇಕ ವಿಷಯಗಳ ಮೇಲೆ ಆಧಾರಿತವಾಗಿವೆಯೇ ವಿನಃ ಯಾವುದೇ ಒಂದು ವಿಷಯದ ಮೇಲೆ ಆಧಾರಿತವಾಗಿಲ್ಲ. ನಂಬಿಕೆಯು ವಿಶ್ವವ್ಯಾಪಿಗುಣವನ್ನು ಹೊಂದಿದೆಯೆಂಬುದರ ಹಿಂದಿನ ಜನಾಂಗಿಕ, ಸಾಂಸ್ಕೃತಿಕ ನೆಲೆಯನ್ನು ಗಂಭೀರವಾಗಿ ಪರಿಗಣಿಸಿದರೆ, ಒಂದು ನಂಬಿಕೆಯನ್ನು ಬಲವಾಗಿ ಒಪ್ಪುವ ಮತ್ತು ನಿಷೇಧಿಸುವ ಜನಸಮುದಾಯಗಳು ಮೂಲದಲ್ಲಿ ಒಂದಾಗಿರಬಹುದೇ? ಇದು ಕೇವಲ ಊಹೆ ಮಾತ್ರವಾಗಿರದೆ, ಆಧಾರಗಳ ಮೂಲಕ ಮಾಡಿದ ಊಹೆಯಾಗಿದೆ.

ಸಂಸ್ಕೃತಿಯ ವ್ಯಾಖ್ಯಾನದಲ್ಲಿ ಮಾನವಕುಲಶಾಸ್ತ್ರದ ಮಹತ್ವವನ್ನು ಕುರಿತು ಪ್ರತ್ಯೇಕವಾಗಿ ಹೇಳುವ ಮತ್ತು ಚರ್ಚಿಸುವ ಅಗತ್ಯವಿದೆ. ಆಧುನಿಕ ಮಾನವಕುಲಶಾಸ್ತ್ರಜ್ಞನೆಂದು ಕರೆಯಲ್ಪಡುವ ಇ.ಬಿ. ಟೇಲರ್‌ನ ಸಾಂಸ್ಕೃತಿಕ ವಿಕಾಸತತ್ವದ ಚಿಂತನಾಕ್ರಮವು ಈ ನಿಟ್ಟಿನಲ್ಲಿ ಬಹುಮುಖ್ಯವಾದುದೆಂದು ಅನಿಸುತ್ತದೆ. ಅಂತೆಯೇ ಟೇಲರನ 'ಅನಿಮಿಸಂ' ಎಂಬ ಸರ್ವಾತ್ಮಕತ್ವ ಪ್ರಮೇಯವು ಆದಿಮ ಜನರ ನಂಬಿಕೆಯ ಮೂಲಗಳನ್ನು ಸಶಕ್ತವಾಗಿ ವಿವರಿಸುವ ಪ್ರಮೇಯವಾಗಿದೆ. ನಂಬಿಕೆಯು ರೂಪಿಸಲ್ಪಡುವ ಈ ಅಲೌಕಿಕ ಶಕ್ತಿಯನ್ನು ಮಾನವಕುಲಶಾಸ್ತ್ರಜ್ಞರು ಇಂಗ್ಲೀಷಿನಲ್ಲಿ 'ಮನ' ಎಂದು ಕರೆದರು. ಟೇಲರ್ ಮನ ಮತ್ತು ಟ್ಯಾಬೂ ಬಗೆಗಿರುವ ಅಂತರ್ಗತ ನಂಬಿಕೆಗಳ ಬಗೆಗೆ ವಿಶೇಷವಾದ ವ್ಯಾಖ್ಯಾನಗಳನ್ನು ನೀಡಿದ್ದಾನೆ. ಇದರೆಲ್ಲ ಮಹತ್ವಕ್ಕಿಂತ ಟೇಲರ್ ರೂಪಿಸಿದ 'ಮಾನವಕುಲವೆಲ್ಲಾ

[7] ಅದೇ. ಪುಟ.159

[8] ಅದೇ. ಪುಟ.160

ಒಂದೇ ಮೂಲದ ಒಂದೇ ವಿಕಾಸತತ್ವದ ವಿವಿಧ ರೂಪಗಳು' ಎಂಬ ಪ್ರಮೇಯ ಬಹುಮುಖ್ಯವಾದುದು. ತನ್ನ ವೈಧಾನಿಕತೆ ಮತ್ತು ಸಿದ್ಧಾಂತದ ಬಗ್ಗೆ ಅಚಲ ನಂಬಿಕೆ ಮತ್ತು ಸ್ಪಷ್ಟತೆಯಿದ್ದ ಟೇಲರ್ ನೀಡಿದ ಸಂಸ್ಕೃತಿ ವ್ಯಾಖ್ಯಾನವೂ ಆತನ ಮೇಲಿನ ಪ್ರಮೇಯದಿಂದಲೇ ರೂಪಿತವಾದುದು. "Culture or Civilization taken Its wide enthnographic sence is that complex whole which Indudes knowledge, belief, art, morals, law, costoms, and any other capabilities and nabits acquired by man as a member of Scociety"[9]. ಇದರಾಚೆಯೂ ಟೇಲರ್ ಹೇಳುವ ಮಹತ್ವದ ಮಾತೆಂದರೆ, 'ಮೇಲೆ ಹೇಳಿದ ಮಾನವಸಾಮರ್ಥ್ಯಗಳು ಕೇವಲ ಆದರ್ಶಪ್ರಾಯ ನುಡಿ ನಡಾವಳಿಗಳಿಗಷ್ಟೇ ಸೀಮಿತವಾಗಿರುವುದಿಲ್ಲ' ಎಂಬುದು.

ವಲಸೆಯ ಪ್ರಕ್ರಿಯೆಯು ರೂಪಿಸುವ ನಂಬಿಕೆಯ ಲೋಕದೃಷ್ಟಿಯನ್ನು ಗಮನಿಸುವಾಗ ಟೇಲರನ ವ್ಯಾಖ್ಯಾನ ಮಹತ್ವದ ಬೆಂಬಲವಾಗಿ ನಿಲ್ಲುತ್ತದೆ. ಟೇಲರನು ಈ ವಿಷಯವನ್ನು ದಾಖಲಿಸುವ ಪೂರ್ವದಲ್ಲಿ ಗುಸ್ಟಾವ್ ಕ್ಲೆಮ್‌ನು ಆದಿಮ ಜನರ ಸಂಸ್ಕೃತಿಯನ್ನು ಕುರಿತು ಪ್ರಸ್ತಾಪಿಸುವಾಗ ವಲಸೆಯು ರೂಪಿಸುವ ನಂಬಿಕೆಗಳ ಕುರಿತು ದಾಖಲಿಸುತ್ತಾನೆ. ಪ್ರಾದೇಶಿಕವಾಗಿ "ಪರಸಂಸ್ಕೃತಿಗೆ ವಲಸೆಗಾರರು ತಮ್ಮೊಂದಿಗೆ ಅದುವರೆಗೆ ರೂಪಿಸಿಕೊಂಡಿದ್ದಂತಹ ಸಾಂಸ್ಕೃತಿಕ ಸರಕುಗಳನ್ನು ತಮ್ಮ ಹೊಸ ನೆಲೆಗಳಿಗೆ ಹೊತ್ತು ತರುತ್ತಾರೆ; ಮತ್ತು ಅವರನ್ನು ತಮ್ಮ ನವಜೀವನದ ಅಡಿಪಾಯವನ್ನಾಗಿಸಿಕೊಳ್ಳುತ್ತಾರೆ"[10]. ಮುಂದುವರಿದು ಕ್ಲೆಮ್ ಹೇಳುವ ಮಹತ್ವದ ಮಾತೆಂದರೆ, 'ಸಮಾನಗುಣದ ಜನಾಂಗಗಳ ಸಾಮ್ಯತೆಯನ್ನು ಹೊಂದಿದ ರಾಷ್ಟ್ರಗಳಲ್ಲಿ ನಂಬಿಕೆ ಸಂಪ್ರದಾಯಗಳು ಸಮಾನ ಪ್ರಾಧಾನ್ಯತೆಯನ್ನು ಹೊಂದಿರುತ್ತವೆ' ಎಂಬುದು. ಕ್ಲೆಮ್‌ನ ಈ ವಾದದಿಂದ ಪ್ರಭಾವಿತನಾದ ಟೇಲರ್ ಮೇಲಿನ ತನ್ನ ಪ್ರಮೇಯವನ್ನು ರೂಪಿಸಿದ. ಟೇಲರ್‌ನ ಪ್ರಮೇಯದ ಆಧಾರದ ಮೇಲೆ ಸಂಸ್ಕೃತಿ ನಿರ್ವಚನ ಮಾಡಿದ್ದಲ್ಲದೆ. ಆತನ ಸಿದ್ಧಾಂತವನ್ನು ಮತ್ತಷ್ಟು ವಿಸ್ತರಿಸಿ ಟೇಲರ್‌ನನ್ನು ಜಗದ್ವಿಖ್ಯಾತ ಮಾಡಿದವರಲ್ಲಿ ಕ್ರೋಬರ್ ಮತ್ತು ಕ್ಲೈಡ್ ಕ್ಲುಕ್ಹೊನ್ ಪ್ರಮುಖರು.

**ಡಿ.ಎನ್.ಎ. ನಂಬಿಕೆಗಳು**

ಕ್ಲೆಮ್ ಮತ್ತು ಟೇಲರ್‌ನ ಸಾಂಸ್ಕೃತಿಕ, ಜನಾಂಗಿಕ ಪರಿಕಲ್ಪನೆಗಳಿಗೆ ವರ್ತಮಾನದ ವೈಜ್ಞಾನಿಕ ಆಧಾರಗಳಿವೆಯೇ ಎಂಬುದನ್ನು ಅನ್ವಯಿಸಿ ನೋಡಬೇಕಾಗುತ್ತದೆ. ಈ ಸಂಬಂಧವಾಗಿ ಅನೇಕರು ಕೆಲಸ ಮಾಡಿದ್ದಾರೆ. ಬಾಬಾಸಾಹೇಬ್ ಅಂಬೇಡ್ಕರರು ಅವರಲ್ಲಿ ಪ್ರಮುಖರು. ವಲಸೆ ಮತ್ತು ಸಾಂಸ್ಕೃತಿಕ ಸಮಾನತೆಯ ಬಗ್ಗೆ ಕುಲಚಿಹ್ನೆಗಳ ಆಧಾರಗಳನ್ನು ಕೊಟ್ಟು ಬರೆದವರಲ್ಲಿ ಡಿ.ಡಿ. ಕೊಸಾಂಬಿ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಪ್ರಮುಖರು. ಜಗತ್ತಿನ ಯಾವುದೇ ಮೂಲೆಯಲ್ಲಿರುವ ಯಾವುದೇ, ಜನಾಂಗ ಮತ್ತು ಸಮುದಾಯವಾದರೂ ಮೂಲದಲ್ಲಿ ಒಂದಾಗಿದ್ದರೆ, ಅವು ಸಮಾನ ಕುಲಚಿಹ್ನೆಯನ್ನು ಹೊಂದಿರುತ್ತವೆಯೆಂದು ಅಂಬೇಡ್ಕರ್ ದಾಖಲಿಸುತ್ತಾರೆ. ಮೇಲಿನವರು ಇದನ್ನು ಗುರುತಿಸುವುದು ವಲಸೆಯ ಪ್ರಕ್ರಿಯೆಯಲ್ಲಿ. ಈ ನಿಟ್ಟಿನಲ್ಲಿ ಸ್ಪೆನ್ಸರ್‌ವೆಲ್ಸ್ ಸರಿಗಟ್ಟದ ಕೆಲಸ ಮಾಡಿದ್ದಾನೆ. ಆದಿಮ ಮಾನವನ ಒಟ್ಟು ಬದುಕಿನ ಬಗ್ಗೆ ತಿಳಿಯಲು, ಅವರ ಚರಿತ್ರೆಯ ಬರೆಯಲ್ಪಟ್ಟಿರದ ಕಾರಣ ನಂಬಿಕೆ, ಆಚರಣೆ, ಜೀವನ ಪದ್ಧತಿಯ ಅವಲೋಕನ ಮೇಲೆಯೇ ನಿರ್ಧರಿಸಬೇಕಿದೆ. ಚರಿತ್ರೆಯ ಆರಂಭಿಕ ಕಾಲದಲ್ಲಿ ಬರವಣಿಗೆಯ ದಾಖಲು ಇರದ ಕಾರಣ ಸರಿಯಾದ ಆಧಾರಗಳು ಸಿಗದೇ ಇರಬಹುದು. "But to same extent we can work out what the life of people might have been like back then, sing other kinds of evidence. The evidence in prehistory comes from fossils, archaeological excavations of ancient human settlements. Various objects made by humans, like tools and increasingly Importantly the DNA of both ancient and present day Individuals"[11]. ಇದರೊಂದಿಗಿರುವ ಮಹತ್ವದ ಸವಾಲು ಹಾಗೂ ತಪ್ಪು ಆಲೋಚನೆಯೆಂದರೆ, ನಾವು ನಂಬಿರುವ ಮಾನವನ ಕುರಿತ ಚಿಂತನೆಯೂ ಊಹಾತ್ಮಕವಾದುದು ಎಂಬುದನ್ನು ಡಿ.ಎನ್.ಎ ಫಲಿತಾಂಶಗಳು ಸಾಧಾರವಾಗಿ ನಿರಾಕರಿಸುತ್ತಿವೆ.

ಊಹಾತ್ಮಕ ಚಿಂತನೆಯ ಆಧಾರದ ಮೇಲೆ ನಂಬಿದ ಸಾಮಾಜಿಕ ವ್ಯವಸ್ಥೆಯೂ ಚಾರಿತ್ರಿಕವಾಗಿ ಅಪಕಲ್ಪನೆಗಳ ಮೂಲಕ ತಿರುಚಲ್ಪಟ್ಟ ಚರಿತ್ರೆಯೆಂಬುದನ್ನು ಮಾನವಕುಲಶಾಸ್ತ್ರಜ್ಞರು, ಪುರಾಣಶಾಸ್ತ್ರಜ್ಞರು ನಂಬುವಂತೆ ತಳಿವಿಜ್ಞಾನಿಗಳೂ ನಂಬುತ್ತಾರೆ. "Large Stretchers of our prehistory are being rewritten as we speak, based analysis of DNA. Extracted from individuals who lived thousand or tens of thousands of years ago. Many facts that we took for granted have been proved wrong, and many questions left dangling in the air as historians, archaeologists, and anthropologists argued it out among themselves have been given convincing new answers – thanks to the recently acquired ability of genetic Scientists to Successfully extract DNA from ancient fossils and then sequence it to understand all that bound people together. Or distinguished them from each other"[12]. ಮುಂದುವರಿದು ಟೋನಿ ಜೋಸೆಫ್ ಹೇಳುವುದೇನೆಂದರೆ, ನಮಗೆ ಪರಿಚಯವಿರುವ ಅಥವಾ ನಾವು ಅಧ್ಯಯನಗಳ ಮೂಲಕ ವ್ಯಾಖ್ಯಾನಿಸುವ, ನಮಗೆ ಪರಿಚಯವಿರುವ ಮಾನವ ಜಾತಿಗಳು ಕೇವಲ ಕೆಲವೇ ಕೆಲವು ನೂರಾರು ವರ್ಷಗಳಿಗೆ ಹಿಂದಕ್ಕೆ ಸೇರಿದವು ಮಾತ್ರ. ಅದು ಬಿಟ್ಟರೆ ಆ ಜಾತಿಗಳ ಮಧ್ಯೆ ಜೈವಿಕವಾಗಿ, ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಒಂದಕ್ಕೊಂದು ಸಂಬಂಧಗಳು ಬೆಸೆದುಕೊಂಡಿವೆ, ಬೆರೆತುಹೋಗಿವೆ. ವಿಶೇಷವೆಂದರೆ ಇವೆಲ್ಲವೂ ನಮ್ಮ ಊಹೆಗೂ ಅತೀತವಾಗಿ ಉಳಿದುಬಿಡುತ್ತವೆ. 'ಅನಂತಕಾಲ' ಎಂದು ಹೇಳುವ ವಿಷಯಗಳಲ್ಲಿ ಕೂಡ ಈಗ ದಿನಾಂಕಗಳು, ವಿಶ್ಲೇಷಣೆಗಳು ದೊರೆಯುತ್ತಿವೆ. ನಮ್ಮ ಸಂಸ್ಕೃತಿ ಮತ್ತು ಸಮಾಜದ ಮೂಲಕ, ಹೊಸ ಓದಿನ ಗ್ರಹಿಕೆಯ ಮೂಲಕ ಇದೆಲ್ಲವನ್ನೂ ಮಾಡಲು ಸಾಧ್ಯವಾಗಿದೆ. ಸಮಗಿರುವ ಮುಖ್ಯ ಸವಾಲು ಈ ಸಂಕರಗಳ ಮಧ್ಯೆಯೇ ಅಂದಂದಿನ ಸಾಮಾಜಿಕ, ಪ್ರಾದೇಶಿಕತೆಯ ಸಾಂಸ್ಕೃತಿಕ ನಂಬಿಕೆಗಳನ್ನು ನಿರ್ದಿಷ್ಟವಾಗಿ, ಅಧಿಕೃತವಾಗಿ ಹೇಳುವ ಪ್ರಮೇಯದ ಬಗ್ಗೆ.

ಡಿ.ಎನ್.ಎ. ಉತ್ತರಿಸಲು ಸಾಧ್ಯವಾಗದ ಸಂಕೀರ್ಣ ಎನಿಸುವ ಪ್ರಶ್ನೆಗಳನಿಟ್ಟುಕೊಂಡೂ ವರ್ತಮಾನದಲ್ಲಿ DNAಗೆ ಋಣಿಗಳಾಗಿರಬೇಕಾಗಿದೆ. ಕಾರಣ, 65000 ಸಂವತ್ಸರಗಳ ಹಿಂದೆ ಭಾರತಕ್ಕೆ ವಲಸೆ ಬಂದ ಆಫ್ರಿಕದ ಸಮೂಹಗಳಿಗೆ ನಾವು ವಾರಸುದಾರರೆಂದು, ಕೊನೆವರೆಗೂ ನಾವು ಅವರಿಗೆ ಚಿರಋಣಿಗಳಾಗಿರುವೆವು ಎಂಬುದು ಆರುವರ್ಷಗಳ ಕೆಳಗೇ ನಮಗೆ ತಿಳಿದಿರಲಿಲ್ಲ. ಆದರೆ ಈಗ ತಿಳಿದಿದೆ. ನಾವೀಗ DNAಯ ಖಚಿತ ಫಲಿತದ ಮೂಲಕ ಸರಳವಾಗಿ ಸ್ಪಷ್ಟತೆ ಪಡೆಯಬಹುದು ಎಂಬುದನ್ನು ಸಾಬೀತುಪಡಿಸಲಾಗಿದೆ. ಈ ಆಯಾಮದ ಆಧಾರಗಳ ಮೇಲೆ ಮನುಷ್ಯನ ಪ್ರಾಚೀನ ಚರಿತ್ರೆಯನ್ನೊಮ್ಮೆ ಗಮನಿಸಿದರೆ, ಕಳೆದ ಶತಮಾನಗಳನ್ನು ಕ್ರಮವಾಗಿ ಜೋಡಿಸಲು

9 Tylor. E.B. Primitive Culture.1871, p.01
10 ಉದ್ಧೃತ: ತಪಸ್ವೀ ಕುಮಾರ್. ನಂ. ಸಂಸ್ಕೃತಿ ವಿಕಾಸ, 2000, ಪುಟ.18
11 Tony Joseph. Early Indians, 2018, p.06
12 Idib.07

ಶಕ್ತವಾಗಿದ್ದೇವೆಂದೂ ನಮಗೆ ಗೊತ್ತಿದೆ. "We now know that large portions of European populations were replaced not once but twice within the last 10,000 years. First a mass migration of farmers from west Asia around 9000 years ago mixed with or replaced already, established hunter – gatherers in Europe. And then mass migration from the Eurasian steppes – about 5000 years ago mixed with or replaced the then exiting population of European farmers. In the Americans we now know that native American populations before the arrival of Europeans owed their ancestry to not one but at least three migrations from Asia. In east Asia, we know that much of the ancestry of people in the region derives from two or more Major expansions of populations from the Chinese agricultural heartland. In 2010 we learned that modern humans had Interbred with Neanderthals and in 2014 we learned that our ancestors had Interbreed with Denis vans (a member of the Homo species that was identified only because of ancient DNA sequencing) as well"[13]. ಹಾಗಾಗಿ ಮಾನವಕುಲಶಾಸ್ತ್ರೀಯ ವೈಧಾನಿಕತೆಗೆ ವೈಜ್ಞಾನಿಕ ಸಾಕ್ಷ್ಯಗಳನ್ನು ಒದಗಿಸುವುದು ಸುಲಭ ಮಾತ್ರವಲ್ಲ, ವೈಜ್ಞಾನಿಕಗೊಳಿಸಲು ಸಾಧ್ಯವಾಗುತ್ತದೆ.

ವಂಶಶಾಸ್ತ್ರಜ್ಞರ ಪ್ರಕಾರ ಜಗತ್ತಿನಲ್ಲಿ ಈಗ ಎಲ್ಲಿಯೂ ಶುದ್ಧವಂಶವೆಂಬುದು ಉಳಿದಿಲ್ಲ. ಎಲ್ಲಾ ಕಡೆಯೂ ವಂಶಗಳು ಸಂಕರವಾಗಿ ಹೋಗಿವೆ. ಭಾರತದಲ್ಲಿ ಈ ಸಂಕರ ವಿಶೇಷವಾಗಿ ನಡೆದಿದೆ. "ಹಿಂದೂ ಜನತೆಯಲ್ಲಿ ಪರಕೀಯ ಅಂಶಗಳು' ಎಂಬ ತಮ್ಮ ಲೇಖನದಲ್ಲಿ ಶ್ರೀ ಡಿ.ಆರ್. ಭಂಡಾರ್ಕರ್ ಅವರು ಹೀಗೆ ಹೇಳಿದ್ದಾರೆ. ಪರಕೀಯ ಅಂಶ ಬೆರೆಯದಂಥ ಒಂದು ವರ್ಗವಾಗಲೀ ಜಾತಿಯಾಗಲಿ ಭಾರತದಲ್ಲಿ ಉಳಿದಿಲ್ಲ. ರಾಜಪೂತ, ಮರಾಠ ಮೊದಲಾದ ಕ್ಷತ್ರಿಯ ವರ್ಗಗಳಲ್ಲಿ ಮಾತ್ರವಲ್ಲ ತಾವು ಸಂಪೂರ್ಣ ಶುದ್ಧರೆಂದು ಭ್ರಮಿಸಿಕೊಂಡಿರುವ ಬ್ರಾಹ್ಮಣರಲ್ಲೂ ಕೂಡ ಪರಕೀಯ ರಕ್ತಸಂಕರವಾಗಿದೆ. ವಂಶಸಂಕರವನ್ನು ತಡೆಯುವ ಅಥವಾ ರಕ್ತಶುದ್ಧಿಯನ್ನು ರಕ್ಷಿಸಿಕೊಳ್ಳುವ ಮಾರ್ಗವಾಗಿಯೇ ಜಾತಿಪದ್ಧತಿ ಬೆಳೆಯಿತೆಂದು ಹೇಳಲಾಗದು. ವಾಸ್ತವವಾಗಿ ನೋಡಿದರೆ ಭಾರತದ ವಿವಿಧ ಜನಾಂಗಗಳಲ್ಲಿ ಪರಸ್ಪರ ರಕ್ತಸಂಬಂಧ ಹಾಗೂ ಸಂಸ್ಕೃತಿ ಸಮನ್ವಯ ನಡೆದು ಹೋಗಿ ಎಷ್ಟೋ ಕಾಲದ ನಂತರ ಜಾತಿಪದ್ಧತಿ ಹುಟ್ಟಿಕೊಂಡಿತು. ಜಾತಿಪದ್ಧತಿಗಳನ್ನು ಜನಾಂಗಬೇಧಗಳೆಂದು ಭ್ರಮಿಸಿ ಹಾಗೆ ನಡೆದುಕೊಳ್ಳುವುದೆಂದರೆ ವಸ್ತುಸ್ಥಿತಿಯ ವಿಪರ್ಯಾಸ"[14]. ಮತ್ತಷ್ಟು ಸಾಕ್ಷ್ಯಗಳನ್ನು ನೀಡಬಹುದಾದರೂ ಲೇಖನ ಔಚಿತ್ಯ ಮೀರಿ ದೀರ್ಘವಾಗುತ್ತಿದೆ. ಈ ಕುರಿತಾಗಿ ಮತ್ತೊಂದು ಲೇಖನವನ್ನು ಬರೆಯುವುದು ಕೂಡ ಅಗತ್ಯವೆಂದು ಭಾವಿಸುತ್ತೇನೆ. ಕನ್ನಡದಲ್ಲಿಯೂ ಕೆಲವರು ಈ ಕುರಿತಾಗಿ ಬರೆಯುವುದು ಕಾಲದ ಅಗತ್ಯ.

**ಎತ್ನೋ ಸೆಂಟ್ರಿಸಂನ ನಂಬಿಕೆಗಳು**

ವಲಸೆ, ಸಂಕರ, ನಂಬಿಕೆಗಳ ಕುರಿತಾಗಿ ವೈಜ್ಞಾನಿಕ ಫಲಿತಗಳು ದೊರಕುತ್ತಿವೆಯಾದರೂ, ಮೇಲರಿಮೆ ಮತ್ತು ಕೀಳರಿಮೆಯ ಭಾವನೆ ಮತ್ತು ನಂಬಿಕೆಗಳನ್ನು ಇವು ಎಷ್ಟರಮಟ್ಟಿಗೆ ನಿವಾರಿಸಲು ಸಾಧ್ಯವಾಗಿದೆಯೆಂಬದೂ ಮುಖ್ಯ ಪ್ರಶ್ನೆಯೇ. ಜನಾಂಗಿಕವಾದ ಬಲವಾದ ನಂಬಿಕೆಗಳು ಮತ್ತು ಆಚರಣೆಯನ್ನು ಸಮರ್ಥಿಸುವ ಡಿ.ಎನ್.ಎ.ಗಳೂ ಇಲ್ಲವೆಂದಲ್ಲ. ಯಾವುದೇ ದೇಶದ ಇಲ್ಲವೇ ಜಗತ್ತಿನ ಬಂಡವಾಳಶಾಯಿ ವ್ಯವಸ್ಥೆಯು ಪ್ರಭುತ್ವದ ಹಿಂದೆ ನಿಂತು ರೂಪಿಸುವ ಅಧ್ಯಯನ ವಿಧಾನಗಳು ಸಬಾಲ್ಟರ್ನ್ ಸಮುದಾಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಪ್ರಮೇಯಗಳನ್ನು ರೂಪಿಸುವುದಲ್ಲದೆ, ಜನಾಂಗಿಕವಾದ ಅಹಂಮಿಕೆಯನ್ನೂ ತಣ್ಣಗೆ ಪೋಷಿಸುತ್ತವೆ. ಶ್ರೇಷ್ಠ–ಕನಿಷ್ಠ, ಒಪ್ಪಿತ–ಒಪ್ಪಿತವಲ್ಲದ, ಆರ್ಯ–ಆರ್ಯೇತರ, ಕಪ್ಪು–ಬಿಳಿಪು ಎಂಬ ವರ್ಗವಿಂಗಡನೆಯ ಅಧ್ಯಯನಕ್ರಮಗಳೂ ಜನಾಂಗಿಕ ಶ್ರೇಷ್ಠತೆಯ ಒಪ್ಪಿತ ಫಲಗಳಾಗಿರುತ್ತವೆ. ಸೃಷ್ಟಿಪುರಾಣಗಳು, ಸಮುದಾಯಗಳ ಕುಲಕಥನಗಳೂ ಜನರ ಮನಸಿನಲ್ಲಿ ಇಂಥ ಭಾವನೆಗಳನ್ನು ಬಲವಾಗಿ ಬೇರೂರಿಸುತ್ತವೆ; ನಂಬಿಸುತ್ತವೆ. ಈ ನಂಬಿಕೆಯನ್ನು ಮಾನವಕುಲಶಾಸ್ತ್ರದಲ್ಲಿ 'ಎತ್ನೋ ಸೆಂಟ್ರಿಸಂ' ಎಂದು ಕರೆಯಲಾಗುತ್ತದೆ. ಕೊನೆಗೆ ಇದರ ಹೊರತಾಗಿ ಯಾರೂ ಇಲ್ಲ ಎನ್ನುವಷ್ಟರಮಟ್ಟಿಗೆ ನಮ್ಮನ್ನು ನಂಬಿಸುತ್ತದೆ. ಅಂತಿಮವಾಗಿ ಇದರ ಪರಿಣಾಮವೆಂದರೆ, "ನಮ್ಮನ್ನು ನಮ್ಮದನ್ನು ಬಿಟ್ಟು ಉಳಿದವರ ಜೀವನ ಸಾಧಾರಣವೂ, ಅತಾರ್ಕಿಕವೂ, ಅಸಹಜವೂ, ಅತ್ಯಲ್ಪವೂ, ಆಗಿರುತ್ತದೆ. ನಮ್ಮ ಸಂಸ್ಕೃತಿ ನಮಗೆ ಅಪ್ಯಾಯಮಾನವಾಗಿ ತೋರುತ್ತಿರುತ್ತದೆ. ಈ ಧೋರಣೆ ಎಷ್ಟು ತೀವ್ರತರವಾಗಿರುತ್ತದೆಯೆಂದರೆ, ತಾವು ಎಷ್ಟೇ ವಿಶಾಲ ಹೃದಯದ ವಸ್ತುನಿಷ್ಠ ದೃಷ್ಟಿಧೋರಣೆಯುಳ್ಳ ಸುಧಾರಿತರು ಎಂದುಕೊಂಡರೂ ಸ್ವಲ್ಪ ಪ್ರಮಾಣದಲ್ಲಿಯಾದರೂ ಅಂಥಹದ್ದರಲ್ಲಿ ಕೂಡ ಅಹಂಶ್ರೇಷ್ಠತ್ವ ಧ್ಯೇಯ ಧೋರಣೆ ಇದ್ದೇ ಇರುತ್ತದೆ. ಹಾಗಿರದ ಜನ ಯಾವ ಸಮಾಜದಲ್ಲಿಯೂ ಕಾಣಸಿಗದು"[15]. ಕಾರಣ, ಯಾರಿಗಾದರೂ ಯಾವುದೇ ಸಂಸ್ಕೃತಿಯ ಉಡುಗೆ–ತೊಡುಗೆ, ಆಹಾರ ಪದ್ಧತಿ, ಭಾಷಿಕ ಜಗತ್ತು, ಲೈಂಗಿಕ ಸಂಬಂಧಿ ನಂಬಿಕೆಗಳು, ನಡಾವಳಿಗಳ ಪೂರ್ವ ಪೀಳಿಕೆಯ ನಂಬಿಕೆಗಳನ್ನು ಒಳಗೆಗೊಂಡಂತೆ ಬೇರಾವುದೇ ಸಮಾನ್ಯ ಸಂಗತಿಯ ಬಗ್ಗೆ ನಿರಾಕರಣೆಯ ಭಾವವು ಇದ್ದೇ ಇರುತ್ತದೆ.

ಮ್ಯಾಥ್ಯೂ ಅರ್ನಾಲ್ಡ್, ವೆರ್ನರ್ ಜೇಗರ್, ಪೊಯ್ಸ್ ಮತ್ತು ಟಿ.ಎಸ್. ಎಲಿಯಟ್ ಮುಂತಾದವರ ಸಂಸ್ಕೃತಿ ವ್ಯಾಖ್ಯಾನಗಳನ್ನು ಗಮನಿಸಿದರೆ, ಆಹಂ ಶ್ರೇಷ್ಠತೆಯ ವ್ಯಸನ ಪ್ರಧಾನಗುಣವಾಗಿ ಕಾಣುತ್ತದೆ. ಕನ್ನಡದಲ್ಲಿ ಈ ನೆಲೆಯ ಗ್ರಹಿಕೆಗಳು ಸಾಕಷ್ಟಿವೆ. ಡಿ.ವಿ.ಜಿ.ಯವರ ಸಂಸ್ಕೃತಿ ನಿರ್ವಚನಗಳು ಇದೇ ನೆಲೆಯವು. ಸಾಂಸ್ಕೃತಿಕವಾಗಿ ಮೇಲಿನ ಜಾತಿಗಳ ಸಂಸ್ಕೃತಿಯನ್ನು ಕೆಳಜಾತಿಗಳು ಸಹಜವಾಗಿ ಅನುಸರಿಸುತ್ತವೆ ಎಂದು 'ಸಂಸ್ಕೃತಾನುಕರಣ' ಪ್ರಮೇಯ ರೂಪಿಸಿದ ಕರ್ನಾಟಕದ ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್ ಅವರ ಸಿದ್ಧಾಂತವು 'ಎತ್ನೊ ಸೆಂಟ್ರಿಕ್' ನೆಲೆಯಿಂದ ಬಂದದ್ದು. ತಳಸಮುದಾಯಗಳ ನಂಬಿಕೆಯ ಆಚರಣಾಲೋಕವನ್ನು ತುಚ್ಛೀಕರಿಸುವ ಈ ಚಿಂತನೆ 19ನೇ ಶತಮಾನದಲ್ಲಿ ಮೂಡಿಬಂದ ವಸಾಹತು ಧೋರಣೆಯನ್ನು ತನ್ನೊಡಲಲ್ಲಿಟ್ಟುಕೊಂಡ 'ಸಾಮಾಜಿಕ ವಿಕಾಸವಾದ' ಅಧ್ಯಯನ ವಿಧಾನ. ಇದರ ಬೋಧನೆ ಮತ್ತು ತಿಳುವಳಿಕೆಯೇನೆಂದರೆ, "ಪಾಶ್ಚಾತ್ಯ ಪ್ರಗತಿಶೀಲ ಸಮಾಜಗಳು ಸಾಮಾಜಿಕ ವಿಕಾಸತತ್ವದ ಶ್ರೇಣಿಯಲ್ಲಿ ಸದಾ ಮೇಲಿನ ಸ್ತರದಲ್ಲಿಯೇ ಇರುತ್ತವೆ. ಆದಿವಾಸಿ ಬುಡಕಟ್ಟು ಮುಂತಾದ ಸಮಾಜಗಳು ಸಾಂಸ್ಕೃತಿಕವಾಗಿ ದೈಹಿಕವಾಗಿ ಕೂಡ ಸದಾ ಅತ್ಯಂತ ಕೆಳಸ್ತರದಲ್ಲಿಯೇ ಇರುತ್ತವೆ. ಈ ತತ್ವವನ್ನು ಲೋಕದ ಎಲ್ಲ ಸಮಾಜಗಳಿಗೂ ಅನ್ವಯಿಸಿ ಒಂದು ಶ್ರೇಷ್ಠ ಮೇಲ್ವರ್ಗದವರ ಲೋಕ ಮತ್ತೊಂದು ಕೆಳವರ್ಗದವರ ಪ್ರಪಂಚ ಎಂಬುದಾಗಿ ವರ್ಗೀಕರಿಸಬಹುದು ಎಂಬುದೇ ಆ ವಾದದ ಸಾರ"[16]. ಪಾಶ್ಚಾತ್ಯರ

---

13 Idib.08

14 ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ.1, ಪುಟ.59

15 ತಪಸ್ವೀ ಕುಮಾರ್. ನಂ. ಸಂಸ್ಕೃತಿ ವಿಕಾಸ, 2000, ಪುಟ.56

16 ಅದೇ. ಪುಟ.60

‘ಇಡಿಗಂಟು’ ತೆಗೆದುಕೊಂಡು ಅಧ್ಯಯನ ಮಾಡಿದ ಎಂ.ಎಸ್. ಶ್ರೀನಿವಾಸ್ ಇದೇ ವಾದವನ್ನು ಭಾರತಕ್ಕೆ ಅನ್ವಯಿಸಿ ಗಿಳಿಪಾಠ ಒಪ್ಪಿಸಿದರು.

ಜನ್ಮತಃ ಬ್ರಾಹ್ಮಣರಾಗಿದ್ದ ಶ್ರೀನಿವಾಸ್ ಅವರಿಗೆ ಈ ಅಧ್ಯಯನ ವಿಧಾನ ಅಪ್ಯಾಯಮಾನವಾಗಿ ಕಾಣಿಸಿರುವಲ್ಲಿ ಯಾವುದೇ ಅಚ್ಚರಿಯಿಲ್ಲ. Riligion and Society among the Coorge of South India, The Remembered village, Social change in Modern India ಈ ಮೂರೂ ಕೃತಿಗಳು ಸಂಸ್ಕೃತಾನುಕರಣ ವೈಧಾನಿಕತೆಯವು. ಇದೇ ಅಂಶವನ್ನಿಟ್ಟುಕೊಂಡು ಎಡ್ಮಂಡ್ ಲಿಚ್ ಕೂಡ “ಶ್ರೀನಿವಾಸರು ಸ್ವತಃ ದಕ್ಷಿಣ ಭಾರತದ ಒಬ್ಬ ಬ್ರಾಹ್ಮಣ. ಆದ್ದರಿಂದ ತಮ್ಮದೇ ಸಮುದಾಯದ ಬಗ್ಗೆ ಅವರು ಬರೆದಿರುವುದು ಅನಿವಾರ್ಯವಾಗಿ ಪಕ್ಷಪಾತದಿಂದ, ಪೂರ್ವಾಗ್ರಹದಿಂದ ಕೂಡಿದೆ. ಆದ್ದರಿಂದ ಸಂಸ್ಕೃತಾನುಕರಣೆಯ ಬಗೆಗಿನ ಅವರ ವಾದ ದುರ್ಬಲವಾಗಿದೆ”[17]ಎಂದು ಟೀಕಿಸಿದ್ದಾರೆ. ಈ ಮಾತನ್ನು ಇಷ್ಟು ಬಲವಾಗಿ ಹೇಳಲು ಮುಖ್ಯ ಕಾರಣವೆಂದರೆ, ಶ್ರೀನಿವಾಸ್ ಅವರಿಗೆ ಮಾರ್ಗದರ್ಶರಾಗಿದ್ದ ರ್‍ಯಾಡ್ ಕ್ಲಿಪ್‌ಬ್ರೌನ್ ಇದನ್ನು ‘ಸತ್ತು ಹೋದ ತಪ್ಪು ಅಧ್ಯಯನದ ಅಪಾಯಕಾರಿ ನಡೆ’ಯೆಂದು ಸಾಮಾಜಿಕ ವಿಕಾಸವಾದವನ್ನು ನಿರಾಕರಿಸಿದ್ದರು. ಸಾಮಾಜಿಕ ವಿಕಾಸವಾದವನ್ನು ಬಲವಾಗಿ ಖಂಡಿಸಿ ಬೋ ಅಸ್ ‘ಸಾಂಸ್ಕೃತಿಕ ಸಾಪೇಕ್ಷತೆ’ಯ ಸಿದ್ಧಾಂತವನ್ನೇ ರೂಪಿಸಿದ್ದರು. ಅಹಂ ಶ್ರೇಷ್ಠತಾ ಸಿದ್ಧಾಂತದ ಪ್ರತಿಪಾದಕರೆಲ್ಲಾ ವಿಕೃತವಾದಿಗಳೆಂದೂ ಖಂಡಿಸಿದ್ದರು.

ರಾಜಕಾರಣ ಮತ್ತು ಪ್ರಭುತ್ವದ ಜೊತೆಗೆ ಮೇಲರಿಮೆಯ ನಂಬಿಕೆಯೊಳಗಿನ ಅಹಂ ರೂಪಿಸುವ ಆಲೋಚನಾ ಕ್ರಮವು ಜೀವವಿರೋಧಿ ವೈಧಾನಿಕತೆಯ ನಂಬಿಕೆಯೊಂದನ್ನು ಹೇಗೆ ರೂಪಿಸುತ್ತದೆ ಎಂಬುದು. ಲೋಕವು ಸಾರ್ವತ್ರಿಕವಾಗಿ ನಂಬುವ ಕ್ರಮವೊಂದನ್ನು ಭ್ರಷ್ಟಗೊಳಿಸಿ ಕೀಳರಿಮೆಯನ್ನು ರೂಪಿಸುತ್ತದೆ. ಈ ಕ್ರಮವನ್ನು ಬೋ ಅಸ್ ತೀವ್ರವಾಗಿಯೇ ವಿರೋಧಿಸಿದ. ಈತನ ಸಿದ್ಧಾಂತದ ಪ್ರಕಾರ “ಪ್ರತಿಯೊಂದು ಸಮುದಾಯದ ಇತಿಹಾಸವು ಅಪೂರ್ವವೂ, ವಿನೂತನವೂ ಆಗಿರುವಂಥದ್ದು. ಒಂದು ಸಂಸ್ಕೃತಿಯ ಇವತ್ತಿನ ಸ್ಥಿತಿಗತಿಗೆ ಅದು ಬೆಳೆದು ಬಂದ ಬಗೆ ಮುಖ್ಯ ಕಾರಣವಾಗಿರುತ್ತದೆ. ಆದ್ದರಿಂದ ಅದನ್ನು ವಿಭಿನ್ನ ಇತಿಹಾಸದ ಹಿನ್ನೆಲೆಯುಳ್ಳ ಮತ್ತೊಂದು ಸಂಸ್ಕೃತಿಯೊಂದಿಗೆ ಹೋಲಿಸಿ ಅವನ್ನು ತರತಮವೆಂದು ನಿರ್ಣಯಿಸವಂತಹ ಕ್ರಮ ತಪ್ಪು. ಕೆಲ ಕೆಲವು ವಿಷಯಗಳಲ್ಲಿ ಹೆಚ್ಚಿನ ಒತ್ತಡಕ್ಕೆ ಸಿಕ್ಕಿ ಹೆಚ್ಚಿನ ಮಾರ್ಪಾಡು ಹೊಂದಿದ್ದಿರಬಹುದು. ಪ್ರತಿಯೊಂದು ಸಂಸ್ಕೃತಿಗೂ ಸ್ವತಂತ್ರ ಇತಿಹಾಸವಿರುವುದರಿಂದ ಶ್ರೇಷ್ಠತೆಯ ದೃಷ್ಟಿಯಿಂದ ಪರಸ್ಪರ ಹೋಲಿಸಿ ನೋಡುವಂತಿಲ್ಲ”[18]. ಹಾಗಾಗಿ ಸಂಸ್ಕೃತಿಗಳನ್ನು ಅಳೆಯುವ ತಕ್ಕ ನಿರ್ಣಾಯಕ ಮಾಪನ ಇದ್ದಿರಲು ಸಾಧ್ಯವಿಲ್ಲ. ಡಾರ್ವಿನ್ ಈ ಕ್ರಮವನ್ನು ವೈಜ್ಞಾನಿಕವಾಗಿ ದಾಖಲಿಸಿದ್ದಾನೆ. ಈ ಕ್ರಮದಲ್ಲಿ ಹೇಳಲೇಬೇಕಾದ ಇಬ್ಬರು ವಿದ್ವಾಂಸರೆಂದರೆ, ಎಲ್.ಎಚ್. ಮಾರ್ಗನ್ ಮತ್ತು ರಾಲ್ಫ್‌ಲಿಂಟನ್. ಬಾಬಾಸಾಹೇಬರು ತಮ್ಮ ಸಂಶೋಧನೆಯಿಂದ ಜಗತ್ತು ನಂಬಿಕೊಂಡಿದ್ದ ಆಲೋಚನಕ್ರಮಗಳನ್ನು ಮುರಿದು ಕಟ್ಟುವಾಗ ರೂಪಿಸಿದ ನಂಬಿಕೆಯನ್ನೂ ಇಲ್ಲಿ ನೆನೆಸಿಕೊಳ್ಳಬಹುದು.

**ತುದಿಮಾತು**

ಮಂಜುನಾಥ ಬೇವಿನಕಟ್ಟೆಯವರ ಸಂಶೋಧನಾ ಮಹಾಪ್ರಬಂಧವಾದ ‘ಕನ್ನಡ ಜನಪದ ನಂಬಿಕೆಗಳು’ ಕೃತಿಯ ಕುರಿತಾದ ಈ ಲೇಖನವು ಕೃತಿಕೇಂದ್ರಿತ ವಿಮರ್ಶೆಯಲ್ಲ. ಕೃತಿಯಲ್ಲಿ ನಿರೂಪಿಸಿರುವ ನಂಬಿಕೆಗಳ ಬಹು ಆಯಾಮಗಳನ್ನು ಆಧಾರವಾಗಿಟ್ಟುಕೊಂಡು ವಿಸ್ತರಿಸಿದ ಬರೆಹ. ಸಂಶೋಧನಾ ವೈಧಾನಿಕತೆಗಳು ರೂಪಿಸುವ ನಂಬಿಕೆಗಳ ರಾಜಕಾರಣ ಸಮುದಾಯಗಳ ನಂಬಿಕೆಗಳಾಗಿ ಎಂಥಾ ಅಪಾಯಗಳನ್ನು ತಂದಿವೆ ಮತ್ತು ಅವುಗಳನ್ನು ಬಲವಾಗಿ ಖಂಡಿಸಿದ ಸಿದ್ಧಾಂತಗಳನ್ನು ಹೇಗೆ ದಮನಿಸಲಾಗಿದೆ ಎಂಬುದರ ಬಗ್ಗೆ ಈ ಲೇಖನ ಯೋಚಿಸಲು ಪ್ರಯತ್ನಿಸುತ್ತದೆ.

ಬೇವಿನಕಟ್ಟೆಯವರು ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯ ವಿಶ್ವವ್ಯಾಪ್ತಿಯನ್ನು ಹೊಂದಿದೆಯಾದರೂ ಕನ್ನಡದ ನಂಬಿಕೆಗಳು ಎಂದು ಕರೆಯುವುದು ಸ್ವಲ್ಪ ಕಷ್ಟ. ಯಾವ ನಂಬಿಕೆಗೂ ನಿರ್ದಿಷ್ಟ ಪ್ರಾದೇಶಿಕತೆಯಿರಲಾರದೆಂಬುದೇ ಇದಕ್ಕಿರುವ ಕಾರಣ. ನಂಬಿಕೆಗಳ ನಿರ್ದಿಷ್ಟ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರೆ ಸೂಕ್ತವಾಗುತ್ತಿತ್ತಲ್ಲದೆ ವೈಧಾನಿಕತೆಗೆ ಅನುಗುಣವಾಗಿ ಪ್ರಮೇಯಗಳನ್ನು ರೂಪಿಸಲು ಸಾಧ್ಯವಾಗುತ್ತಿತ್ತು. ಸಂಶೋಧನೆ ಮತ್ತು ಮಾಹಿತಿಯ ಬಗೆಗಿನ ಬೆರಗು, ವಿಸ್ತೃತ ಓದಿನ ಬೆರಗು ಕಾಣುತ್ತದೆಯಾದರೂ, ಬೆರಗಿನ ನಿರ್ದಿಷ್ಟ ಗುರಿ ಮತ್ತು ತಲುಪಿದ ಫಲಿತ ಕಾಣುವುದಿಲ್ಲ. ಮಾಹಿತಿಯ ಹೊರೆಯಿಂದಾಗಿ ವಿವರಣೆ ಮುಖ್ಯನೆಲೆಯಲ್ಲಿ ನಿಂತು ವಿಶ್ಲೇಷಣೆ ಹಿಂದೆ ಸರಿದಿದೆ ಎನಿಸುತ್ತದೆ. ನಾವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಬೇವಿನಕಟ್ಟೆಯವರು ಸಂಶೋಧನೆ ಮಾಡುವ ಕಾಲದ ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಮಾಡುವ ಸಂಶೋಧಕರ ಪ್ರಧಾನ ಆದ್ಯತೆಯೂ ಮಾಹಿತಿ ಸಂಗ್ರಹವೇ ಆಗಿತ್ತೆಂಬುದು. ಈ ನಿಟ್ಟಿನಲ್ಲಿ ಅದು ಪ್ರಧಾನ ದೋಷವೆಂಬ ಆರೋಪದಿಂದ ಮುಕ್ತವಾಗಿಸಲೂ ಸಾಧ್ಯವಿದೆ. ಅದೇ ಕಾಲಕ್ಕಾಗಲೇ, ಅದಕ್ಕಿಂತ ಪೂರ್ವದಲ್ಲಿ ನಂಬಿಕೆಗಳ ಕುರಿತಂತೆ ಸೈದ್ಧಾಂತಿಕ ವಿಶ್ಲೇಷಣೆಗಳು ದಾಖಲಾಗಿದ್ದವು ಎಂಬುದನ್ನೂ ಮರೆಯಬಾರದು. ಅಂಥ ಸಂಶೋಧನೆಗಳನ್ನು ಗಮನಿಸಿದ್ದರೆ, ಈ ಕೃತಿ ಮತ್ತಷ್ಟು ಬಲಗೊಳ್ಳುತ್ತಿತ್ತೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಕೃತಿಯಲ್ಲಿ ಸಿಗುವ ಮಾಹಿತಿಗಳನ್ನು ಬಳಸಿಕೊಂಡು ಈ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ಮಾಡಲು ಸಾಧ್ಯವಿದೆಯೆಂದು ಈ ಕೃತಿಯನ್ನು ಓದಿದ ಯಾರಿಗಾದರೂ ಅನಿಸದಿರದು.

**ಪರಾಮರ್ಶನ ಗ್ರಂಥಗಳು**

1. ಚೆಲುವರಾಜು. 2011, ಕನ್ನಡ ಜನಪದ ಮಹಾಕಾವ್ಯಗಳ ಪರ್ಯಾಯ ವಿವೇಚನೆ, ಪ್ರಕಾಶಕರು ನಾಗರತ್ನ ಹೆಚ್.ಎಸ್. ಶಿವಮೊಗ್ಗ.
2. ತಪಸ್ವೀ ಕುಮಾರ್. ನಂ. 2000, ಸಂಸ್ಕೃತಿ ವಿಕಾಸ, ಚೇತನ ಬುಕ್ ಹೌಸ್, ಮೈಸೂರು
3. ಪ್ರಭಾಕರ. ಎ.ಎಸ್. 1999.ಮ್ಯಾಸಬೇಡರ ಕಥನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಬೋರಲಿಂಗಯ್ಯ. ಹಿ.ಚಿ. 2000, ಬುಡಕಟ್ಟು ದೈವಾರಾಧನೆ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ.
5. ಮುತ್ತಯ್ಯ. ಎಸ್.ಎಂ. 2005, ಲಿಖಿತ ಅಲಿಖಿತ. ಸೃಷ್ಟಿ ಪ್ರಕಾಶನ. ಬೆಂಗಳೂರು.
6. ಮುತ್ತಯ್ಯ. ಎಸ್.ಎಂ. 2014, ಕಂಪಳ, ಸಿ.ವಿ.ಜಿ. ಇಂಡಿಯಾ. ಬೆಂಗಳೂರು.
7. ಮಂಜುನಾಥ ಬೇವಿನಕಟ್ಟೆ. 2007, ಕನ್ನಡ ಜನಪದ ನಂಬಿಕೆಗಳು, ಜ್ಯೋತಿ ಪ್ರಕಾಶನ, ಮೈಸೂರು.
8. ರಾಮಯ್ಯ ಕೋಟಗಾನಹಳ್ಳಿ. 1993, ಸಿಂದ್‌ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.

[17] ಅನು: ಶಾಮಭಟ್ಟ. ಟಿ.ಆರ್. ನೆನಪಿನ ಹಳ್ಳಿ.2015, ಪುಟ.XLiii

[18] ತಪಸ್ವೀ ಕುಮಾರ್. ನಂ. ಸಂಸ್ಕೃತಿ ವಿಕಾಸ, 2000, ಪುಟ.60–61

9. ರಂಗಾರೆಡ್ಡಿ ಕೋಡಿರಾಂಪುರ. 2010, ಜನಪದ ಸಂಸ್ಕೃತಿ. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
10. ಲಕ್ಷ್ಮೀಪತಿ ಕೋಲಾರ. 1993, ಮಾಸ್ತೀಕರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
11. ಶಿವಣ್ಣ ಮೀರಸಾಬಿಹಳ್ಳಿ, 2005, ಕಾಡುಗೊಲ್ಲ ಬುಡಕಟ್ಟು ವೀರರು, ಸಿ.ವಿ.ಜಿ. ಪ್ರಕಾಶನ. ಬೆಂಗಳೂರು.
12. ಶಿವಣ್ಣ ಮೀರಾಸಾಬಿಹಳ್ಳಿ. 1999, ಗೊಲ್ಲಕಡಗ, ಸಿ.ವಿ.ಜಿ. ಪಬ್ಲಿಕೇಷನ್ಸ್. ಬೆಂಗಳೂರು.
13. ಶಿವಣ್ಣ ಮೀರಾಸಾಬಿಹಳ್ಳಿ. 1999, ದುರುಗ ಜಾನಪದ, ಶಕ್ತಿ ಪ್ರಕಾಶನ. ಬೆಂಗಳೂರು.
14. ಶಿವಾನಂದ ಕೆಳಗಿನಮನಿ.2009, ಮಾದಿಗ ಲಿಂಗಾಯತರು. ಶ್ರೀ.ಶಿರಡಿ ಸಾಯಿ ಎಂಟರ್ ಪ್ರೈಸಸ್. ಬೆಂಗಳೂರು.
15. ಹಿರೇಮಠ್. ಎಸ್.ಎಸ್. 1992. ಮಾದಾರ ಚನ್ನಯ್ಯನ ನಾಡಿನಲ್ಲಿ, ಸಮತಾ ಪ್ರಕಾಶನ. ಹರಪ್ಪನಹಳ್ಳಿ.
16. ಹಿರೇಮಠ್. ಎಸ್.ಎಸ್. 1992. ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಹಬ್ಬಗಳು. ಸಮತಾ ಪ್ರಕಾಶನ. ಹರಪ್ಪನಹಳ್ಳಿ.
17. ಹಿರೇಮಠ್. ಎಸ್.ಎಸ್. 1993, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಜಾತ್ರೆಗಳು. ಸಮತಾ ಪ್ರಕಾಶನ. ಹೊಸಪೇಟೆ.
18. ಪುಟ್ಟಪ್ಪ. ಕೆ.ವಿ. 1970, ಪ್ರ. ಸಂ. ಯುಗಯಾತ್ರೀ ಭಾರತೀಯ ಸಂಸ್ಕೃತಿ. ಸಂಪುಟ.01. (ಮೂಲ. ಕಾಣೆ.ಪಿ.ವಿ.) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.
19. ಪುಟ್ಟಪ್ಪ. ಕೆ.ವಿ. 1971, ಪ್ರ. ಸಂ. ಯುಗಯಾತ್ರೀ ಭಾರತೀಯ ಸಂಸ್ಕೃತಿ. ಸಂಪುಟ.02. (ಮೂಲ. ಕಾಣೆ. ಪಿ.ವಿ.) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.
20. ಪ್ರಧಾನ್ ಗುರುದತ್ತ. 2004.ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, (ಮೂಲ. ಭಗವತ್ ಶರಣ ಉಪಾಧ್ಯಾಯ) ನವಕರ್ನಾಟಕ ಪ್ರಕಾಶನ, ಬೆಂಗಳೂರು.
21. ಶಾಮಭಟ್ಟ. ಟಿ.ಆರ್. 2015, ನೆನಪಿನ ಹಳ್ಳಿ, (ಮೂಲ. ಶ್ರೀನಿವಾಸ್.ಎಂ.ಎನ್.) ಐಬಿಎಚ್ ಪ್ರಕಾಶನ, ಬೆಂಗಳೂರು.
22. ಶ್ರೀಮತಿ. ಎಚ್.ಎಸ್. 2010, ಹೆಣ್ಣುತನ ಎಂಬ ಕಣ್ಕಟ್ಟು. (ಮೂಲ. ಬೆಟ್ಟಿ ಫ್ರೀಡನ್) ಪ್ರಗತಿ ಗ್ರಾಫಿಕ್ಸ್ ಬೆಂಗಳೂರು.
23. ಶ್ರೀಮತಿ. ಎಚ್.ಎಸ್. 2011, ದ ಸೆಕೆಂಡ್ ಸೆಕ್ಸ್. (ಮೂಲ. ಸಿಮೋನ್ ದ ಬೊವಾ) ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
24. ಸೀತಾರಾಮಶಾಸ್ತ್ರಿ ಎನ್.ಎಸ್. 1957. ಕುಟುಂಬ ಸ್ವಂತ ಆಸ್ತಿ ಮತ್ತು ಪ್ರಭುತ್ವದ (ಮೂಲ. ಫ್ರೆಡ್ರಿಕ್ ಏಂಗೆಲ್ಸ್) ಜನಶಕ್ತಿ ಪ್ರಕಾಶನ. ಬೆಂಗಳೂರು.
25. Tony Joseph. Early Indians, Juggernaut books, New Delhi; c2018.
26. Tylor. E.B. Primitive Culture. John murray Albemarle street, London; c1871.